# ಅಧ್ಯಾಯ – XI

## ಮರುಪಾವತಿಗಳು

**54. ತೆರಿಗೆಯ ಮರುಪಾವತಿ.–** (1) ಯಾವುದೇ ತೆರಿಗೆಯ ಮತ್ತು ಅಂಥ ತೆರಿಗೆ ಅಥವಾ ಆತನಿಂದ ಸಂದಾಯವಾದ ಯಾವುದೇ ಇತರ ಮೊತ್ತಗಳ ಮೇಲೆ ಸಂದಾಯ ಮಾಡಿದ ಬಡ್ಡಿ, ಯಾವುದಾದರೂ ಇದ್ದರೆ, ಅವುಗಳ ಮರುಪಾವತಿಯನ್ನು ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯು, ಸಂಬಂಧಿಸಿದ ದಿನಾಂಕದಿಂದ ಎರಡು ವರ್ಷಗಳ ಮುಕ್ತಾಯದ ಮೊದಲು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಒಂದು ಅರ್ಜಿಯನ್ನು ಹಾಕಬಹುದು:

ಪರಂತು, ಪ್ರಕರಣ 49ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ನಗದು ಖಾತೆಯಲ್ಲಿನ ಯಾವುದೇ ಉಳಿಕೆಯ ಮರುಪಾವತಿಯನ್ನು ಕ್ಲೇಮು ಮಾಡುವ ಒಬ್ಬ ನೋಂದಾಯಿತ ವ್ಯಕ್ತಿಯು, ಪ್ರಕರಣ 39ರ ಅಡಿಯಲ್ಲಿ ಒದಗಿಸಿದ ರಿಟರ್ನನಲ್ಲಿ ನಿಯಮಿಸಬಹುದಾದ ಅಂಥ ವಿಧಾನಲ್ಲಿ ಅಂಥ ಮರುಪಾವತಿಯನ್ನು ಕ್ಲೇಮು ಮಾಡಬಹುದು.

(2) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ಮೇಲೆ ಸಂದಾಯ ಮಾಡಿದ ರಾಜ್ಯ ತೆರಿಗೆಯ ಮರುಪಾವತಿಗೆ ಹಕ್ಕುಳ್ಳ ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜೆನ್ಸಿ ಅಥವಾ ಸಂಯುಕ್ತ ರಾಷ್ಟ್ರ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 46) ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ಬಹುಪಕ್ಷೀಯ ಹಣಕಾಸಿನ ಸಂಸ್ಥೆ ಮತ್ತು ಸಂಘಟನೆ, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರಿ ಕಛೇರಿ ಅಥವಾ ಪ್ರಕರಣ 55ರ ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗ, ಅಂಥ ಪೂರೈಕೆಯನ್ನು ಸ್ವೀಕರಿಸಿದ ತ್ರೈಮಾಸಿಕದ ಕೊನೆಯ ದಿನದಿಂದ ಆರು ತಿಂಗಳುಗಳು ಮುಗಿಯುವ ಮೊದಲು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಅಂಥ ಮರುಪಾವತಿಗಾಗಿ ಅರ್ಜಿಯನ್ನು ಹಾಕಬಹುದು.

(3) ಉಪಪ್ರಕರಣ (10)ರ ಉಪಬಂಧಗಳಿಗೆ ಒಳಪಟ್ಟು, ಒಬ್ಬ ನೋಂದಾಯಿತ ವ್ಯಕ್ತಿಯು, ಯಾವುದೇ ತೆರಿಗೆ ಅವಧಿಯ ಕೊನೆಯಲ್ಲಿ ಬಳಕೆಯಾಗದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕ್ಲೇಮು ಮಾಡಬಹುದು:

ಪರಂತು, ಬಳಕೆಯಾಗದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಈ ಕೆಳಕಂಡ ಸಂದರ್ಭಗಳನ್ನು ಹೊರತುಪಡಿಸಿದಂತೆ ಅವಕಾಶ ನೀಡತಕ್ಕದ್ದಲ್ಲ–

(i) ತೆರಿಗೆ ಸಂದಾಯವಿಲ್ಲದೆ ಮಾಡಿದ ಶೂನ್ಯ ದರದ ಪೂರೈಕೆಗಳು;

(ii) ಪರಿಷತ್ತಿನ ಶಿಫಾರಸ್ಸಿನ ಅನ್ವಯ ಸರ್ಕಾರ ಅಧಿಸೂಚಿಸಬಹುದಾದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳನ್ನು ಹೊರತುಪಡಿಸಿದಂತೆ ಹುಟ್ಟುವಳಿ ಪೂರೈಕೆಗಳ ಮೇಲಿನ ತೆರಿಗೆ ದರಕ್ಕಿಂತ ಹೂಡುವಳಿಗಳ ಮೇಲಿನ ತೆರಿಗೆ ದರ ಹೆಚ್ಚಿರುವ (ದರವಿಲ್ಲದ ಅಥವಾ ಸಂಪೂರ್ಣ ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿದಂತೆ) ಕಾರಣಕ್ಕಾಗಿ ಜಮೆಯು ಸಂಚಿತಗೊಂಡಿರುವುದು:

ಮತ್ತು ಪರಂತು, ಭಾರತದಿಂದ ಹೊರಗಡೆಗೆ ರಫ್ತಾದ ಸರಕುಗಳು ರಫ್ತು ಸುಂಕಕ್ಕೆ ಒಳಪಟ್ಟಿರುವ ಸಂದರ್ಭಗಳಲ್ಲಿ ಬಳಕೆಯಾಗದ ಯಾವುದೇ ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಅವಕಾಶ ನೀಡತಕ್ಕದ್ದಲ್ಲ:

ಅಲ್ಲದೇ ಪರಂತು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನು ಅಂಥ ಪೂರೈಕೆಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡಿದ್ದರೆ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಅವಕಾಶ ನೀಡತಕ್ಕದ್ದಲ್ಲ.

(4) ಅರ್ಜಿಯು ಕೆಳಕಂಡವುಗಳಿಂದ ಜೊತೆಗೂಡಿರತಕ್ಕದ್ದು;–

(ಎ) ಅರ್ಜಿದಾರನಿಗೆ ಮರುಪಾವತಿಯು ಬಾಕಿ ಇದೆ ಎನ್ನುವುದನ್ನು ಸ್ಥಾಪಿಸುವುದಕ್ಕಾಗಿ ನಿಯಮಿಸಬಹುದಾದ ಅಂಥ ದಸ್ತಾವೇಜು ಪುರಾವೆಗಳು; ಮತ್ತು

(ಬಿ) ಅಂಥ ಕ್ಲೇಮು ಮಾಡಿದ ಮರುಪಾವತಿಗೆ ಸಂಬಂಧಿಸಿದಂತೆ, ಆತನಿಂದ ಸಂಗ್ರಹ ಮಾಡಿದ ಅಥವಾ ಆತನು ಸಂದಾಯ ಮಾಡಿದ ತೆರಿಗೆಯ ಮೊತ್ತ ಅಥವಾ ಅಂಥ ತೆರಿಗೆ ಅಥವಾ ಯಾವುದೇ ಇತರ ಮೊತ್ತಗಳ ಮೇಲೆ ಸಂದಾಯ ಮಾಡಿದ ಬಡ್ಡಿ, ಯಾವುದಾದರೂ ಇದ್ದರೆ, ಅಂಥ ತೆರಿಗೆ ಹಾಗೂ ಬಡ್ಡಿಯ ಹೊರೆಯನ್ನು ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎನ್ನುವುದನ್ನು ಸ್ಥಾಪಿಸುವುದಕ್ಕಾಗಿ ಅರ್ಜಿದಾರನು ಒದಗಿಸಬಹುದಾದ ಅಂಥ ದಸ್ತಾವೇಜುಗಳು ಮತ್ತು ಇತರ ಪುರಾವೆಗಳು (ಪ್ರಕರಣ 33ರಲ್ಲಿ ಉಲ್ಲೇಖಿಸಲಾದ ದಸ್ತಾವೇಜುಗಳನ್ನು ಒಳಗೊಂಡಂತೆ):

ಪರಂತು, ಮರುಪಾವತಿ ಎಂದು ಕ್ಲೇಮು ಮಾಡಿರುವ ಮೊತ್ತವು ಎರಡು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿದ್ದಲ್ಲಿ, ಅರ್ಜಿದಾರನು ಯಾವುದೇ ದಸ್ತಾವೇಜುಗಳು ಮತ್ತು ಇತರ ಪುರಾವೆಗಳನ್ನು ಒದಗಿಸುವುದು ಅವಶ್ಯಕವಿರತಕ್ಕದ್ದಲ್ಲ, ಆದರೆ ಅದಕ್ಕೆ ಬದಲಾಗಿ ಅವನ ಬಳಿ ಲಭ್ಯವಿರುವ ದಸ್ತಾವೇಜುಗಳು ಮತ್ತು ಇತರ ಪುರಾವೆಗಳ ಆಧಾರದ ಮೇಲೆ, ಅಂಥ ತೆರಿಗೆ ಹಾಗೂ ಬಡ್ಡಿಯ ಹೊರೆಯನ್ನು ಯಾವೊಬ್ಬ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎಂದು ಪ್ರಮಾಣೀಕರಿಸುವ ಒಂದು ಘೋಷಣೆಯನ್ನು ಅವನು ಸಲ್ಲಿಸಬಹುದು.

(5) ಅಂಥ ಯಾವುದೇ ಅರ್ಜಿಯನ್ನು ಸ್ವೀಕರಿಸಿದಾಗ, ಮರುಪಾವತಿಯನ್ನಾಗಿ ಕ್ಲೇಮು ಮಾಡಿರುವ ಮೊತ್ತದ ಪೂರ್ಣ ಅಥವಾ ಭಾಗವನ್ನು ಮರುಪಾವತಿ ಮಾಡಬಹುದು ಎಂದು ಯುಕ್ತ ಅಧಿಕಾರಿಯು ಮನದಟ್ಟು ಮಾಡಿಕೊಂಡರೆ, ಆತನು ಅದಕ್ಕನುಸಾರವಾಗಿ ಆದೇಶ ಮಾಡಬಹುದು ಮತ್ತು ಹಾಗೆ ನಿರ್ಧರಿಸಿದ ಮೊತ್ತವು ಪ್ರಕರಣ 57ರಲ್ಲಿ ಉಲ್ಲೇಖಿಸಿದ ನಿಧಿಗೆ ಜಮೆಗೊಳ್ಳತಕ್ಕದ್ದು.

(6) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ನೋಂದಾಯಿತ ವ್ಯಕ್ತಿಗಳ ವರ್ಗವನ್ನು ಹೊರತುಪಡಿಸಿದ ನೋಂದಾಯಿತ ವ್ಯಕ್ತಿಗಳಿಂದ, ಮಾಡಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ–ದರ ಪೂರೈಕೆಯ ಪ್ರಯುಕ್ತ ಮರುಪಾವತಿಗಾಗಿ ಮಾಡಿರುವ ಯಾವುದೇ ಕ್ಲೇಮಿನ ಸಂದರ್ಭದಲ್ಲಿ, ಯುಕ್ತ ಅಧಿಕಾರಿಯು, ತಾತ್ಕಾಲಿಕವಾಗಿ ಅಂಗೀಕರಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಹೊರತುಪಡಿಸಿದಂತೆ, ಹಾಗೆ ಕ್ಲೇಮು ಮಾಡಿದ ಒಟ್ಟು ಮೊತ್ತದ ಶೇಕಡಾ ತೊಂಬತ್ತರಷ್ಟನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳು, ಮಿತಿಗಳು ಮತ್ತು ರಕ್ಷಣೋಪಾಯಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ಮರುಪಾವತಿ ಮಾಡಬಹುದು ಮತ್ತು ತದನಂತರ ಅರ್ಜಿದಾರನಿಂದ ಒದಗಿಸಿದ ದಸ್ತಾವೇಜುಗಳ ಯುಕ್ತ ಪರಿಶೀಲನೆಯ ನಂತರ ಮರುಪಾವತಿ ಕ್ಲೇಮಿನ ಅಂತಿಮ ಇತ್ಯರ್ಥಕ್ಕಾಗಿ ಉಪಪ್ರಕರಣ (5)ರ ಅಡಿಯಲ್ಲಿ ಆದೇಶ ಮಾಡುಬಹುದು.

(7) ಎಲ್ಲಾ ವಿಧದಲ್ಲಿಯೂ ಪೂರ್ಣವಾದ ಅರ್ಜಿ ಸ್ವೀಕೃತಿ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಯುಕ್ತ ಅಧಿಕಾರಿಯು ಉಪಪ್ರಕರಣ (5)ರ ಅಡಿಯಲ್ಲಿ ಆದೇಶವನ್ನು ಹೊರಡಿಸತಕ್ಕದ್ದು.

(8) ಉಪಪ್ರಕರಣ (5)ರಲ್ಲಿ ಏನೇ ಒಳಗೊಂಡಿದ್ದರೂ, ಮರುಪಾವತಿ ಮಾಡಬಹುದಾದ ಮೊತ್ತವು ಈ ಕೆಳಗಿನವುಗಳಿಗೆ ಸಂಬಂಧಿಸಿದ್ದರೆ, ಅಂಥ ಮೊತ್ತವನ್ನು ನಿಧಿಗೆ ಜಮೆಗೊಳಿಸುವುದಕ್ಕೆ ಬದಲಾಗಿ, ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದು,–

(ಎ) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ–ದರದ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆ ಅಥವಾ ಅಂಥ ಶೂನ್ಯ–ದರದ ಪೂರೈಕೆಗಳನ್ನು ಮಾಡುವಲ್ಲಿ ಬಳಕೆಯಾದ ಹೂಡುವಳಿಗಳು ಹಾಗೂ ಹೂಡುವಳಿ ಸೇವೆಗಳ ಮೇಲಿನ ತೆರಿಗೆಯ ಮರುಪಾವತಿ;

(ಬಿ) ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿ;

(ಸಿ) ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾದರೂ ಒದಗಿಸದೇ ಇರುವಂತಹ ಮತ್ತು ಅದಕ್ಕಾಗಿ ಬೆಲೆಪಟ್ಟಿಯನ್ನು ನೀಡಿಲ್ಲದಿರುವ ಅಥವಾ ಮರುಪಾವತಿಯ ವೋಚರನ್ನು ನೀಡಲಾಗಿರುವ ಪೂರೈಕೆಯ ಮೇಲೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿ;

(ಡಿ) ಪ್ರಕರಣ 77ರ ಅನುಸಾರವಾದ ತೆರಿಗೆಯ ಮರುಪಾವತಿ;

(ಇ) ಅಂಥ ತೆರಿಗೆ ಮತ್ತು ಬಡ್ಡಿಯ ಹೊರೆಯನ್ನು ಅವನು ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಿರದಿದ್ದರೆ, ಅರ್ಜಿದಾರನಿಂದ ಸಂದಾಯ ಮಾಡಿದ ತೆರಿಗೆ ಮತ್ತು ಬಡ್ಡಿ, ಯಾವುದಾದರೂ ಇದ್ದರೆ, ಅಥವಾ ಇತರ ಯಾವುದೇ ಮೊತ್ತ; ಅಥವಾ

(ಎಫ್) ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಯಾವುದೇ ಇತರ ಅರ್ಜಿದಾರರ ವರ್ಗದಿಂದ ಹೊತ್ತುಕೊಂಡ ತೆರಿಗೆ ಅಥವಾ ಬಡ್ಡಿ.

(9) ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ, ಆದೇಶ ಅಥವಾ ನಿರ್ದೇಶನದಲ್ಲಿ ಅಥವಾ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಯಾವುದೇ ಇತರ ಉಪಬಂಧಗಳಲ್ಲಿ, ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ, ಉಪಪ್ರಕರಣ (8)ರ ಉಪಬಂಧಗಳಿಗೆ ಅನುಸಾರವಾಗಿರುವುದರ ಹೊರತಾಗಿ ಮರುಪಾವತಿ ಮಾಡತಕ್ಕದ್ದಲ್ಲ.

(10) ಯಾವುದಾದರೂ ರಿಟರ್ನನ್ನು ಒದಗಿಸಲು ತಪ್ಪಿರುವ ಅಥವಾ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಅಪೀಲು ಪ್ರಾಧಿಕಾರದಿಂದ ತಡೆ ಇರದಂತಹ ಯಾವುದೇ ತೆರಿಗೆ, ಬಡ್ಡಿ ಅಥವಾ ದಂಡವನ್ನು ಸಂದಾಯ ಮಾಡುವುದು ಅಗತ್ಯವಿರುವಂತಹ ನೋಂದಾಯಿತ ವ್ಯಕ್ತಿಗೆ, ಉಪಪ್ರಕರಣ (3)ರ ಅಡಿಯಲ್ಲಿ ಯಾವುದೇ ಮರುಪಾವತಿಯು ಬಾಕಿಯಿದ್ದಲ್ಲಿ, ಯುಕ್ತ ಅಧಿಕಾರಿಯು,–

(ಎ) ಸದರಿ ವ್ಯಕ್ತಿಯು ರಿಟರ್ನನ್ನು ಒದಗಿಸುವವರೆಗೆ ಅಥವಾ ತೆರಿಗೆ, ಬಡ್ಡಿ ಅಥವಾ ಸಂದರ್ಭಾನುಸಾರವಾಗಿ ದಂಡವನ್ನು ಸಂದಾಯ ಮಾಡುವವರೆಗೆ ಬಾಕಿಯಿರುವ ಮರುಪಾವತಿಯ ಸಂದಾಯವನ್ನು ತಡೆಹಿಡಿಯಬಹುದು;

(ಬಿ) ತೆರಿಗೆದಾಯಕ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಸಂದಾಯ ಮಾಡುವುದಕ್ಕೆ ಬಾಧ್ಯನಾಗಿರುವ ಆದರೆ ಸಂದಾಯವಾಗದೆ ಬಾಕಿ ಉಳಿದಿರುವ ಯಾವುದೇ ತೆರಿಗೆ, ಬಡ್ಡಿ, ದಂಡ, ಶುಲ್ಕ ಅಥವಾ ಯಾವುದೇ ಇತರ ಮೊತ್ತವನ್ನು, ಬಾಕಿಯಿರುವ ಮರುಪಾವತಿಯಿಂದ ಕಡಿತಗೊಳಿಸಬಹುದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಪದಾವಳಿಯಾದ 'ನಿರ್ದಿಷ್ಟಪಡಿಸಿದ ದಿನಾಂಕ'ವನ್ನು ಈ ಅಧಿನಿಯಮದ ಅಡಿಯಲ್ಲಿ ಅಪೀಲು ಸಲ್ಲಿಸಲು ಇರುವ ಕೊನೆಯ ದಿನಾಂಕ ಎಂದು ಅರ್ಥೈಸತಕ್ಕದ್ದು;

(11) ಮರುಪಾವತಿಗೆ ಎಡೆ ಮಾಡಿಕೊಡುವ ಒಂದು ಆದೇಶವು, ಒಂದು ಅಪೀಲು ಅಥವಾ ಮುಂದುವರೆದ ನಡಾವಳಿಗಳ ಅಥವಾ ಈ ಅಧಿನಿಯಮದ ಅಡಿಯಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಇತರ ನಡಾವಳಿಗಳ ವಸ್ತುವಿಷಯವಾಗಿದ್ದಲ್ಲಿ ಮತ್ತು ದುಷ್ಕೃತ್ಯ ಅಥವಾ ಮೋಸ ಮಾಡಿದುದರ ಕಾರಣದಿಂದಾದ ಅಂಥ ಮರುಪಾವತಿಯ ನೀಡುವಿಕೆಯು ಸದರಿ ಅಪೀಲು ಅಥವಾ ಇತರ ನಡಾವಳಿಗಳಲ್ಲಿ ರಾಜಸ್ವಕ್ಕೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿದೆ ಎಂದು ಆಯುಕ್ತರು ಅಭಿಪ್ರಾಯವನ್ನು ಹೊಂದಿದ್ದಲ್ಲಿ, ಅವರು, ತೆರಿಗೆದಾಯಕ ವ್ಯಕ್ತಿಗೆ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ನಂತರ, ಅವರು ನಿರ್ಧರಿಸಬಹುದಾದ ಅಂಥ ಸಮಯದವರೆಗೆ ಮರುಪಾವತಿಯನ್ನು ತಡೆಹಿಡಿಯಬಹುದು.

(12) ಉಪಪ್ರಕರಣ (11)ರ ಅಡಿಯಲ್ಲಿ ಮರುಪಾವತಿಯನ್ನು ತಡೆಹಿಡಿದಿದ್ದಲ್ಲಿ, ಅಪೀಲು ಅಥವಾ ಮುಂದುವರೆದ ನಡಾವಳಿಗಳ ಪರಿಣಾಮವಾಗಿ ತೆರಿಗೆದಾಯಕ ವ್ಯಕ್ತಿಯು ಮರುಪಾವತಿಗೆ ಹಕ್ಕುಳ್ಳವನಾದರೆ, ಪ್ರಕರಣ 56ರಲ್ಲಿ ಏನೇ ಒಳಗೊಂಡಿದ್ದರೂ ಸಹ, ಶೇಕಡಾ ಆರರಷ್ಟನ್ನು ಮೀರದಂತೆ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಅಧಿಸೂಚಿಸಬಹುದಾದ ಅಂಥ ದರದಲ್ಲಿ ಬಡ್ಡಿಗೆ ಹಕ್ಕುಳ್ಳವನಾಗಿರತಕ್ಕದ್ದು.

(13) ಈ ಪ್ರಕರಣದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಒಬ್ಬ ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ ಅಥವಾ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯು, ಪ್ರಕರಣ 27ರ ಉಪಪ್ರಕರಣ (2)ರ ಅಡಿಯಲ್ಲಿ ಠೇವಣಿ ಮಾಡಿದ ಮುಂಗಡ ತೆರಿಗೆಯ ಮೊತ್ತವನ್ನು, ಆತನಿಗೆ ಮಂಜೂರು ಮಾಡಿದ್ದ ನೋಂದಣಿ ಪ್ರಮಾಣ ಪತ್ರವು ಜಾರಿಯಲ್ಲಿ ಉಳಿದಿರುವ ಸಂಪೂರ್ಣ ಅವಧಿಗೆ ಸಂಬಂಧಿಸಿದಂತೆ, ಪ್ರಕರಣ 39ರ ಅಡಿಯಲ್ಲಿ ಅಗತ್ಯವಿರುವ ಎಲ್ಲಾ ರಿಟರ್ನಗಳನ್ನು ಅಂಥ ವ್ಯಕ್ತಿಯು ಸಲ್ಲಿಸಿದ ಹೊರತು ಮರುಪಾವತಿ ಮಾಡತಕ್ಕದ್ದಲ್ಲ.

(14) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಮೊತ್ತವಿದ್ದರೆ, ಉಪಪ್ರಕರಣ (5) ಅಥವಾ ಉಪಪ್ರಕರಣ (6)ರ ಅಡಿಯಲ್ಲಿ ಮರುಪಾವತಿಯನ್ನು, ಅರ್ಜಿದಾರನಿಗೆ ಸಂದಾಯ ಮಾಡತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,–

(1) "ಮರುಪಾವತಿ"ಯು, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಶೂನ್ಯ–ದರದ ಪೂರೈಕೆಗಳ ಮೇಲೆ ಅಥವಾ ಅಂಥ ಶೂನ್ಯ–ದರದ ಪೂರೈಕೆಗಳನ್ನು ಮಾಡಲು ಉಪಯೋಗಿಸಿದ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳ ಮೇಲಿನ ತೆರಿಗೆಯ ಮರುಪಾವತಿಯನ್ನು ಅಥವಾ ಪರಿಭಾವಿತ ರಫ್ತುಗಳು ಎಂದು ಪರಿಗಣನೆಗೆ ತೆಗೆದುಕೊಂಡ ಸರಕುಗಳ ಪೂರೈಕೆ ಮೇಲಿನ ತೆರಿಗೆಯ ಮರುಪಾವತಿಯನ್ನು, ಅಥವಾ ಉಪಪ್ರಕರಣ (3)ರ ಅಡಿಯಲ್ಲಿ ಉಪಬಂಧಿಸಿದಂತೆ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಒಳಗೊಳ್ಳುತ್ತದೆ.

(2) **"ಸಂಬಂಧಿಸಿದ ದಿನಾಂಕ"** ಎಂದರೆ:–

(ಎ) ಸರಕುಗಳು ಭಾರತದ ಹೊರಗಡೆಗೆ ರಫ್ತಾದ ಸಂದರ್ಭದಲ್ಲಿ, ಅದೇ ಸರಕುಗಳಿಗೆ ಅಥವಾ, ಅಂಥ ಸರಕುಗಳಲ್ಲಿ ಉಪಯೋಗಿಸಿದ ಹೂಡುವಳಿಗಳು ಅಥವಾ ಸಂದರ್ಭಾನುಸಾರವಾಗಿ ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯು ಲಭ್ಯವಿದ್ದಲ್ಲಿ,–

(i) ಸರಕುಗಳು ಸಮುದ್ರ ಅಥವಾ ವಾಯು ಮಾರ್ಗದ ಮೂಲಕ ರಫ್ತಾಗಿದ್ದರೆ, ಅಂಥ ಸರಕುಗಳನ್ನು ತುಂಬಿರುವ ಹಡಗು ಅಥವಾ ವಿಮಾನವು, ಭಾರತವನ್ನು ಬಿಟ್ಟ ದಿನಾಂಕ; ಅಥವಾ

(ii) ಸರಕುಗಳು ಭೂ ಮಾರ್ಗದ ಮೂಲಕ ರಫ್ತಾಗಿದ್ದರೆ, ಅಂಥ ಸರಕುಗಳು ಗಡಿಯನ್ನು ದಾಟಿದ ದಿನಾಂಕ; ಅಥವಾ

(iii) ಸರಕುಗಳು ಅಂಚೆಯ ಮೂಲಕ ರಫ್ತಾಗಿದ್ದರೆ, ಸಂಬಂಧಿಸಿದ ಅಂಚೆ ಕಛೇರಿಯಿಂದ ಭಾರತದ ಹೊರಗಿನ ಸ್ಥಳಕ್ಕೆ ಸರಕುಗಳ ರವಾನೆ ದಿನಾಂಕ.

(ಬಿ) ಪರಿಭಾವಿತ ರಫ್ತುಗಳು ಎಂದು ಪರಿಗಣನೆಗೆ ತೆಗೆದುಕೊಂಡ ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ಸರಕುಗಳಿಗೆ ಸಂಬಂದಿಸಿದಂತೆ ತೆರಿಗೆ ಸಂದಾಯದ ಮರುಪಾವತಿಯು ಲಭ್ಯವಿದ್ದಲ್ಲಿ, ಅಂಥ ಪರಿಭಾವಿತ ರಫ್ತುಗಳಿಗೆ ಸಂಬಂಧಿಸಿದ ರಿಟರ್ನನ್ನು ಒದಗಿಸಿದ ದಿನಾಂಕ;

(ಸಿ) ಭಾರತದ ಹೊರಗಡೆಗೆ ರಫ್ತಾದ ಸೇವೆಗಳ ಸಂದರ್ಭದಲ್ಲಿ, ಅದೇ ಸೇವೆಗಳಿಗೆ ಅಥವಾ ಅಂಥ ಸೇವೆಗಳಲ್ಲಿ ಉಪಯೋಗಿಸಿದ ಹೂಡುವಳಿಗಳು ಅಥವಾ ಸಂದರ್ಭಾನುಸಾರವಾಗಿ, ಹೂಡುವಳಿ ಸೇವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯು ಲಭ್ಯವಿದ್ದಲ್ಲಿ,–

(i) ಅಂಥ ಸಂದಾಯವನ್ನು ಸ್ವೀಕರಿಸುವುದಕ್ಕಿಂದ ಮುಂಚಿತವಾಗಿಯೇ ಸೇವೆಗಳ ಪೂರೈಕೆಯು ಪೂರ್ಣಗೊಂಡಿದ್ದಲ್ಲಿ, ಪರಿವರ್ತನೀಯ ವಿದೇಶಿ ವಿನಿಮಯದಲ್ಲಿ ಸಂದಾಯದ ಸ್ವೀಕೃತಿಯ ದಿನಾಂಕ; ಅಥವಾ

(ii) ಸೇವೆಗಳಿಗಾಗಿ, ಬೆಲೆಪಟ್ಟಿ ನೀಡಿಕೆಯ ದಿನಾಂಕಕ್ಕಿಂತ ಮುಂಚಿತವಾಗಿ, ಸಂದಾಯವನ್ನು ಮುಂಗಡವಾಗಿ ಸ್ವೀಕರಿಸಲಾಗಿದ್ದಲ್ಲಿ, ಬೆಲೆಪಟ್ಟಿ ನೀಡಿಕೆಯ ದಿನಾಂಕ;

(ಡಿ) ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದ ತೀರ್ಪು, ಡಿಕ್ರಿ, ಆದೇಶ ಅಥವಾ ನಿರ್ದೇಶನದ ಪರಿಣಾಮದಿಂದಾಗಿ, ತೆರಿಗೆಯು ಮರುಪಾವತಿದಾಯಕವಾದ ಸಂದರ್ಭದಲ್ಲಿ, ಅಂಥ ತೀರ್ಪು, ಡಿಕ್ರಿ, ಆದೇಶ ಅಥವಾ ನಿರ್ದೇಶನವನ್ನು ತಿಳಿಸಿದ ದಿನಾಂಕ;

(ಇ) ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಯ ಸಂದರ್ಭದಲ್ಲಿ, ಅಂಥ ಮರುಪಾವತಿಗಾಗಿ ಕ್ಲೇಮು ಉದ್ಭವಿಸುವಂತಹ ಹಣಕಾಸು ವರ್ಷದ ಮುಕ್ತಾಯ;

(ಎಫ್) ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ತಾತ್ಕಾಲಿಕವಾಗಿ ತೆರಿಗೆಯನ್ನು ಸಂದಾಯ ಮಾಡಿದ ಸಂದರ್ಭದಲ್ಲಿ, ಅದರ ಅಂತಿಮ ಕರನಿರ್ಧರಣೆಯ ನಂತರದಲ್ಲಿ ಮಾಡಿದ ತೆರಿಗೆಯ ಹೊಂದಾಣಿಕೆಯ ದಿನಾಂಕ;

(ಜಿ) ಪೂರೈಕೆದಾರನನ್ನು ಹೊರತುಪಡಿಸಿದ, ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ, ಅಂಥ ವ್ಯಕ್ತಿಯಿಂದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡೂ ಸ್ವೀಕೃತಿಯಾದ ದಿನಾಂಕ;

(ಹೆಚ್) ಯಾವುದೇ ಇತರ ಸಂದರ್ಭದಲ್ಲಿ, ತೆರಿಗೆಯನ್ನು ಸಂದಾಯ ಮಾಡಿದ ದಿನಾಂಕ.

**55. ಕೆಲವೊಂದು ಪ್ರಕರಣಗಳಲ್ಲಿ ಮರುಪಾವತಿ.–** ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸರ್ಕಾರವು, ಅಧಿಸೂಚನೆಯ ಮೂಲಕ, ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ವಿಶೇಷ ಏಜೆನ್ಸಿ ಅಥವಾ ಸಂಯುಕ್ತ ರಾಷ್ಟ್ರ (ವಿಶೇಷ ಸ್ಥಾನಮಾನ ಮತ್ತು ಉನ್ಮುಕ್ತಿಗಳು) ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 46) ಅಡಿಯಲ್ಲಿ ಅಧಿಸೂಚಿಸಲಾದ ಯಾವುದೇ ಬಹುಪಕ್ಷೀಯ ಹಣಕಾಸಿನ ಸಂಸ್ಥೆ ಮತ್ತು ಸಂಘಟನೆ, ವಿದೇಶಗಳ ಕಾನ್ಸುಲೇಟ್ ಅಥವಾ ರಾಯಭಾರಿ ಕಛೇರಿ, ಅಥವಾ ಈ ಸಂಬಂಧದಲ್ಲಿ ನಿಗದಿಗೊಳಿಸಬಹುದಾದ

ಯಾವುದೇ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವನ್ನು, ನಿಯಮಿಸಬಹುದಾದ ಅಂಥ ನಿಬಂಧನೆಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಅವರಿಂದ ಸ್ವೀಕರಿಸಿದ ಅಧಿಸೂಚಿತ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗಳ ಮೇಲೆ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯನ್ನು ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕವರು ಎಂದು ನಿರ್ದಿಷ್ಟಪಡಿಸಬಹುದು.

**56. ವಿಳಂಬ ಮರುಪಾವತಿಗಳ ಮೇಲಿನ ಬಡ್ಡಿ.–** ಪ್ರಕರಣ 54ರ ಉಪ–ಪ್ರಕರಣ (5)ರ ಅಡಿಯಲ್ಲಿ ಯಾವುದೇ ಅರ್ಜಿದಾರನಿಗೆ ಮರುಪಾವತಿ ಮಾಡಲು ಆದೇಶಿಸಿದ ಯಾವುದೇ ತೆರಿಗೆಯನ್ನು, ಆ ಪ್ರಕರಣದ ಉಪಪ್ರಕರಣ (1)ರ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಮರುಪಾವತಿ ಮಾಡಿರದಿದ್ದರೆ, ಸದರಿ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳು ಕೊನೆಗೊಂಡ ನಂತರದ ನಿಕಟ ದಿನಾಂಕದಿಂದ ಅಂಥ ತೆರಿಗೆಯ ಮರುಪಾವತಿಯಾಗುವವರೆಗೂ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರವು ಹೊರಡಿಸಿದ ಅಧಿಸೂಚನೆಯಲ್ಲಿ ನಿಗದಿಗೊಳಿಸಬಹುದಾದ ಶೇಕಡ ಆರರಷ್ಟನ್ನು ಮೀರದ, ಅಂಥ ದರದಲ್ಲಿನ ಬಡ್ಡಿಯು ಅಂಥ ಮರುಪಾವತಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಿರತಕ್ಕದ್ದು:

ಪರಂತು, ಒಂದು ನ್ಯಾಯನಿರ್ಣಯ ಪ್ರಾಧಿಕಾರ ಅಥವಾ ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದಿಂದ ಹೊರಡಿಸಿದ ಆದೇಶವು, ನಿರ್ಣಾಯಕತೆಯನ್ನು ಪಡೆದು ಅದರಿಂದ ಮರುಪಾವತಿಯ ಯಾವುದೇ ಕ್ಲೇಮು ಉದ್ಭವಿಸಿದ್ದು ಮತ್ತು ಅಂಥ ಆದೇಶದ ಪರಿಣಾಮವಾಗಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಅದನ್ನು ಮರುಪಾವತಿ ಮಾಡಿರದಿದ್ದರೆ, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳು ಕೊನೆಗೊಂಡ ನಂತರದ ನಿಕಟ ದಿನಾಂಕದಿಂದ ಅಂಥ ತೆರಿಗೆಯ ಮರುಪಾವತಿಯ ದಿನಾಂಕದವರೆಗೆ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಸರ್ಕಾರದಿಂದ ಹೊರಡಿಸಿದ ಅಧಿಸೂಚನೆಯಲ್ಲಿ ನಿಗದಿಗೊಳಿಸಬಹುದಾದ ಶೇಕಡ ಒಂಬತ್ತರಷ್ಟನ್ನು ಮೀರದ, ಅಂಥ ದರದಲ್ಲಿನ ಬಡ್ಡಿಯು ಅಂಥ ಮರುಪಾವತಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಿರತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ, ಪ್ರಕರಣ 54ರ ಉಪಪ್ರಕರಣ (5)ರ ಅಡಿಯಲ್ಲಿನ ಯುಕ್ತ ಅಧಿಕಾರಿಯ ಆದೇಶದ ವಿರುದ್ಧ, ಒಂದು ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದಿಂದ ಮರುಪಾವತಿಯ ಆದೇಶವನ್ನು ಮಾಡಿದ್ದಲ್ಲಿ, ಒಂದು ಅಪೀಲು ಪ್ರಾಧಿಕಾರ, ಅಪೀಲು ನ್ಯಾಯಾಧಿಕರಣ ಅಥವಾ ಯಾವುದೇ ನ್ಯಾಯಾಲಯದಿಂದ ಹೊರಡಿಸಿದ ಆದೇಶವು, ಈ ಪ್ರಕರಣದ ಉದ್ದೇಶಕ್ಕಾಗಿ ಸದರಿ ಉಪಪ್ರಕರಣ (5)ರ ಅಡಿಯಲ್ಲಿ ಹೊರಡಿಸಿದ ಆದೇಶ ಎಂದು ಪರಿಭಾವಿಸತಕ್ಕದ್ದು.

**57. ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ.–** (1) ಸರ್ಕಾರವು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು,–

(ಎ) ಪ್ರಕರಣ 54ರ ಉಪಪ್ರಕರಣ (5)ರಲ್ಲಿ ಉಲ್ಲೇಖಿಸಲಾದ ತೆರಿಗೆಯ ಮೊತ್ತವನ್ನು;

(ಬಿ) ನಿಧಿಗೆ ಜಮೆಗೊಳಿಸಿದ ಮೊತ್ತದ ಹೂಡಿಕೆಯಿಂದ ಗಳಿಸಿದ ಯಾವುದೇ ಆದಾಯ; ಮತ್ತು

(ಸಿ) ಇದರಿಂದ ಸ್ವೀಕರಿಸಿದ ಯಾವುದೇ ಇತರ ಹಣಗಳನ್ನು,

– ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿಧಿಗೆ ಜಮೆ ಮಾಡತಕ್ಕದ್ದು.

**58. ನಿಧಿಯ ಬಳಕೆ.–** (1) ಈ ನಿಧಿಗೆ ಜಮೆಗೊಳ್ಳುವ ಯಾವುದೇ ಮೊತ್ತಗಳನ್ನು, ಸರ್ಕಾರವು ಗ್ರಾಹಕರ ಕ್ಷೇಮಾಭಿವೃದ್ಧಿಗಾಗಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಬಳಸತಕ್ಕದ್ದು.

(2) ಭಾರತದ ಕಂಟ್ರೋಲರ್ ಮತ್ತು ಆಡಿಟರ್–ಜನರಲ್‌ರವರೊಡನೆ ಸಮಾಲೋಚನೆಯನ್ನು ನಡೆಸಿ ನಿಯಮಿಸಿಬಹುದಾದ ಅಂಥ ನಮೂನೆಯಲ್ಲಿ ನಿಧಿಗೆ ಸಂಬಂಧಿಸಿದ ಸೂಕ್ತ ಮತ್ತು ಪ್ರತ್ಯೇಕ ಲೆಕ್ಕಪತ್ರ ಮತ್ತು ಸಂಬಂಧಿಸಿದ ಇತರ ದಾಖಲೆಗಳನ್ನು ಸರ್ಕಾರ ಅಥವಾ ಅದರಿಂದ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ನಿರ್ವಹಿಸತಕ್ಕದ್ದು.

# ಅಧ್ಯಾಯ – X

## ಮರುಪಾವತಿ

**89. ತೆರಿಗೆ, ದಂಡ, ಶುಲ್ಕಗಳು ಅಥವಾ ಯಾವುದೇ ಇತರ ಮೊತ್ತದ ಮರುಪಾವತಿಗಾಗಿ ಅರ್ಜಿ.–** (1)ಭಾರತದ ಹೊರಗಡೆಗೆ ರಫ್ತಾದ ಸರಕುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಯನ್ನು ಹೊರತುಪಡಿಸಿದಂತೆ, ಆತನಿಂದ ಸಂದಾಯವಾದ ತೆರಿಗೆ, ದಂಡ, ಶುಲ್ಕಗಳು ಅಥವಾ ಯಾವುದೇ ಇತರ ಮೊತ್ತದ ಮರುಪಾವತಿಯನ್ನು ಕ್ಲೇಮು ಮಾಡುವ ಪ್ರಕರಣ 55ರ ಅಡಿಯಲ್ಲಿ ನೀಡಲಾದ ಅಧಿಸೂಚನೆಯಿಂದ ವ್ಯಾಪ್ತವಾಗುವ ವ್ಯಕ್ತಿಗಳನ್ನು ಹೊರತು ಪಡಿಸಿದ ಯಾವೊಬ್ಬ ವ್ಯಕ್ತಿಯು, ಒಂದು ಅರ್ಜಿಯನ್ನು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು.

ಪರಂತು, ಪ್ರಕರಣ 49ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ವಿದ್ಯುನ್ಮಾನ ನಗದು ಖಾತೆಯಲ್ಲಿನ ಉಳಿಕೆಗೆ ಸಂಬಂಧಿಸಿದ ಮರುಪಾವತಿಯ ಯಾವುದೇ ಕ್ಲೇಮನ್ನು, ಸಂಬಂಧಿಸಿದ ತೆರಿಗೆ ಅವಧಿಗಾಗಿ, **ನಮೂನೆ ಜಿಎಸ್‌ಟಿಆರ್–3** ಅಥವಾ **ನಮೂನೆ ಜಿಎಸ್‌ಟಿಆರ್–4 ಅಥವಾ** ಸಂದರ್ಭಾನುಸಾರವಾಗಿ **ನಮೂನೆ ಜಿಎಸ್‌ಟಿಆರ್–7**ರಲ್ಲಿಒದಗಿಸಿದ ರಿಟರ್ನಿನ ಮೂಲಕ ಮಾಡತಕ್ಕದ್ದು:

ಮತ್ತು ಪರಂತು, ವಿಶೇಷ ಆರ್ಥಿಕ ವಲಯ ಘಟಕ ಅಥವಾ ಒಂದು ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಸಂಬಂಧಿಸಿದಂತೆ, ಮರುಪಾವತಿಗಾಗಿ ಅರ್ಜಿಯನ್ನು ಕೆಳಕಂಡವರು ಸಲ್ಲಿಸತಕ್ಕದ್ದು–

(ಎ) ವಲಯದ ನಿರ್ದಿಷ್ಟಪಡಿಸಿದ ಅಧಿಕಾರಿಯಿಂದ ಸಮ್ಮತಿಸಿದಂತಹ, ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ ವಿಶೇಷ ಆರ್ಥಿಕ ವಲಯದಲ್ಲಿ ಅಂಥ ಸರಕುಗಳು ಪೂರ್ಣವಾಗಿ ಅಂಗೀಕಾರವಾದ ನಂತರ ಸರಕುಗಳ ಪೂರೈಕೆದಾರ;

(ಬಿ) ವಲಯದ ನಿರ್ದಿಷ್ಟಪಡಿಸಿದ ಅಧಿಕಾರಿಯಿಂದ ಸಮ್ಮತಿಸಿದಂತಹ, ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ ಸೇವೆಗಳ ಸ್ವೀಕೃತಿಗೆ ಸಂಬಂಧಿಸಿದ ಅಂಥ ಪುರಾವೆಗಳ ಜೊತೆಯಲ್ಲಿ ಸೇವೆಗಳ ಪೂರೈಕೆದಾರ

[1] [ಅಲ್ಲದೆ ಪರಂತು, ಪರಿಭಾವಿತ ರಫ್ತಗಳು ಎಂದು ಗಣನೆಗೆ ತೆಗೆದುಕೊಳ್ಳಲಾದ ಪೂರೈಕೆಗಳಿಗೆ ಸಂಬಂಧಿಸಿದಂತೆ, ಅರ್ಜಿಯನ್ನು ಕೆಳಕಂಡವರುಗಳು ಸಲ್ಲಿಸಬಹುದು,–

(ಎ) ಪರಿಭಾವಿತ ರಫ್ತಿನ ಪೂರೈಕಗಳನ್ನು ಸ್ವೀಕರಿಸುವವನು;

(ಬಿ) ಸ್ವೀಕರಿಸುವವನು ಅಂಥ ಪೂರೈಕೆಗಳ ಮೇಲೆ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿಕೊಂಡಿರದಿದ್ದಲ್ಲಿ ಮತ್ತು ಅದಕ್ಕಾಗಿ ಪೂರೈಕೆದಾರನು ಮರುಪಾವತಿಯನ್ನು ಕ್ಲೇಮು ಮಾಡಬಹುದು ಎಂದು ಒಂದು ವಾಗ್ದಾನ ಪತ್ರವನ್ನು ನೀಡಿರುವ ಸಂದರ್ಭದಲ್ಲಿ ಪರಿಭಾವಿತ ರಫ್ತಿನ ಪೂರೈಕಗಳ ಪೂರೈಕೆದಾರ;]

ಅಲ್ಲದೆ ಪರಂತು, , ನೊಂದಣಿಯ ಸಮಯದಲ್ಲಿ ಪ್ರಕರಣ 27ರ ಅಡಿಯಲ್ಲಿ ಆತನಿಂದ ಠೇವಣಿಯಿಟ್ಟ ಮುಂಗಡ ತೆರಿಗೆಯಲ್ಲಿ, ಅರ್ಜಿದಾರನಿಂದ ಸಂದಾಯ ಮಾಡಬೇಕಾದ ತೆರಿಗೆಯನ್ನು ಹೊಂದಿಸಿದ ನಂತರದ ಯಾವುದೇ ಮೊತ್ತದ ಮರುಪಾವತಿಯನ್ನು, ಆತನಿಂದ ಒದಗಿಸುವುದು ಅಗತ್ಯವಿರುವ ಕೊನೆಯ ರಿಟರ್ನಿನಲ್ಲಿ ಕ್ಲೇಮು ಮಾಡತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿನ ಅರ್ಜಿಯು, ಅರ್ಜಿದಾರನಿಗೆ ಮರುಪಾವತಿಯು ಬಾಕಿಯಿದೆ ಎಂದು ಸಂಸ್ಥಾಪಿಸಲು, ಅನ್ವಯವಾಗುವಂತೆ, ಕೆಳಕಂಡ ಯಾವುದಾದರೊಂದು ದಸ್ತಾವೇಜುಗಳ ಪುರಾವೆಗಳೊಂದಿಗೆ ಜೊತೆಗೂಡಿರತಕ್ಕದ್ದು:–

---

[1] **ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಹೆಚ್/2017) ದಿನಾಂಕ 09–11–2017ರ ಮೂಲಕ ಮೂರನೇ ಪರಂತುಕವನ್ನು ಪ್ರತಿಯೋಜಿಸಲಾಗಿದೆ.**

(ಎ) ಆದೇಶದ ಉಲ್ಲೇಖ ಸಂಖ್ಯೆ ಮತ್ತು ಅಂಥ ಮರುಪಾವತಿಗೆ ಕಾರಣವಾಗುವ ಯುಕ್ತ ಅಧಿಕಾರಿಯಿಂದ ಅಥವಾ ಒಂದು ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದಿಂದ ಹೊರಡಿಸಿದ ಆದೇಶದ ಒಂದು ಪ್ರತಿ ಅಥವಾ ಪ್ರಕರಣ 107ರ ಉಪಪ್ರಕರಣ (6)ರಲ್ಲಿ ಅಥವಾ ಪ್ರಕರಣ 112ರ ಉಪಪ್ರಕರಣ (8)ರಲ್ಲಿ ನಿರ್ದಿಷ್ಟಪಡಿಸಿರುವ ಮರುಪಾವತಿಯಾಗಿ ಕ್ಲೇಮುಮಾಡಿರುವ ಸಂದಾಯದ ಉಲ್ಲೇಖ ಸಂಖ್ಯೆ;

(ಬಿ) ಶಿಪ್ಪಿಂಗ್ ಬಿಲ್ಲುಗಳ ಅಥವಾ ರಫ್ತುವಿನ ಬಿಲ್ಲುಗಳ ಸಂಖ್ಯೆ ಮತ್ತು ದಿನಾಂಕ ಮತ್ತು ಸರಕುಗಳ ರಫ್ತುವಿನ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಸಂಬಂಧಿಸಿದ ರಫ್ತು ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಸಿ) ಬೆಲೆಪಟ್ಟಿಗಳ ಮತ್ತು ಸೇವೆಗಳ ರಫ್ತುವಿನ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಸಂಬಂಧಿಸಿದ ಬ್ಯಾಂಕಿನ ರಿಯಲೈಸೇಷನ್ ಪ್ರಮಾಣಪತ್ರಗಳು ಅಥವಾ ಸಂದರ್ಭಾನುಸಾರವಾಗಿ ವಿದೇಶಿ ಒಳಮುಖ ಹಣರವಾನೆ ಪ್ರಮಾಣಪತ್ರಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಡಿ) ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಮಾಡಲಾದ ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ಉಪನಿಯಮ (1)ರ ದ್ವಿತೀಯ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಹಿಂಬರಹಕ್ಕೆ ಸಂಬಂಧಿಸಿದ ಪುರಾವೆಯೊಂದಿಗೆ ನಿಯಮ 46ರಲ್ಲಿ ಉಪಬಂಧಿಸಿದಂತೆ ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಇ) ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕ, ಉಪನಿಯಮ (1)ರ ದ್ವಿತೀಯ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಹಿಂಬರಹಕ್ಕೆ ಸಂಬಂಧಿಸಿದ ಪುರಾವೆ ಮತ್ತು ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಮಾಡಲಾದ ಸರಕುಗಳ ಪೂರೈಕೆಯ ಸಂದರ್ಭದಲ್ಲಿ, ವಿಶೇಷ ಆರ್ಥಿಕ ವಲಯ ಅಧಿನಿಯಮ, 2005ರ ಅಡಿಯಲ್ಲಿ ಪರಿಭಾಷಿಸಿದಂತಹ ಪ್ರಾಧಿಕೃತ ಕಾರ್ಯಾಚರಣೆಗಳಿಗಾಗಿ, ಪೂರೈಕೆದಾರನಿಗೆ ಸ್ವೀಕರಿಸುವವನಿಂದ ಮಾಡಲಾದ, ಅವುಗಳ ಪುರಾವೆ ಜೊತೆಯಲ್ಲಿನ, ಸಂದಾಯದ ವಿವರಗಳನ್ನು ಒಳಗೊಂಡಿರುವ ಒಂದು ವಿವರಪತ್ರ;

(ಎಫ್) ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್‌ಗೆ ಮಾಡಲಾದ ಸರಕು ಅಥವ ಸೇವೆಗಳ ಪೂರೈಕೆಯ ಸಂದರ್ಭದಲ್ಲಿ, ಸರಕು ಅಥವ ಸೇವೆಗಳ ಪೂರೈಕೆದಾರನಿಂದ ಸಂದಾಯ ಮಾಡಿದ ತೆರಿಗೆಯ ಹೂಡುವಳಿ ತೆರಿಗೆ ಜಮೆಯನ್ನು ವಿಶೇಷ ಆರ್ಥಿಕ ವಲಯ ಘಟಕ ಅಥವಾ ವಿಶೇಷ ಆರ್ಥಿಕ ವಲಯ ಡೆವೆಲಪರ್ ಉಪಯೋಗಿಸಿಲ್ಲ ಎನ್ನುವ ಒಂದು ಘೋಷಣಾ ಪತ್ರ;

(ಜಿ) ಪರಭಾವಿತ ರಫ್ತುಗಳ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಈ ಸಂಗಬಂಧದಲ್ಲಿ ಅಧಿಸೂಚಿಸಬಹುದಾದ ಅಂಥ ಇತರೇ ಪುರಾವೆಯ ಜೊತೆಗಿನ ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ ಒಂದು ವಿವರಪತ್ರ;

(ಹೆಚ್) ದರವಿಲ್ಲದ ಅಥವಾ ಸಂಪೂರ್ಣ ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿದಂತೆ ಹುಟ್ಟುವಳಿ ಪೂರೈಕೆಗಳ ಮೇಲಿನ ತೆರಿಗೆ ದರಕ್ಕಿಂತ ಹೂಡುವಳಿಗಳ ಮೇಲಿನ ತೆರಿಗೆ ದರ ಹೆಚ್ಚಿರುವ ಕಾರಣಕ್ಕಾಗಿ ಜಮೆಯು ಸಂಚಿತಗೊಂಡಿದ್ದಲ್ಲಿ, ಪ್ರಕರಣ 54ರ ಉಪಪ್ರಕರಣ (3)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಕ್ಲೇಮು ಸಂಬಂಧಿಸಿರುವ ಸಂದರ್ಭದಲ್ಲಿ, ಒಂದು ತೆರಿಗೆ ಅವಧಿಯಲ್ಲಿ ಸ್ವೀಕರಿಸಿದ ಮತ್ತು ನೀಡಿದ ಬೆಲೆಪಟ್ಟಿಗಳ ಸಂಖ್ಯೆ ಮತ್ತು ದಿನಾಂಕವನ್ನು ಒಳಗೊಂಡಿರುವ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ** ಅನುಬಂಧ 1ರಲ್ಲಿ ಒಂದು ವಿವರಪತ್ರ;

(ಐ) ತಾತ್ಕಾಲಿಕ ಕರನಿರ್ಧರಣೆಯ ಅಂತಿಮಗೊಳಿಸುವಿಕೆಯ ಕಾರಣದಿಂದಾಗಿ ಮರುಪಾವತಿ ಉದ್ಭವಿಸಿದ ಸಂದರ್ಭದಲ್ಲಿ, ಅಂತಿಮ ಕರನಿರ್ಧರಣಾ ಆದೇಶದ ಉಲ್ಲೇಖ ಸಂಖ್ಯೆ ಮತ್ತು ಸದರಿ ಆದೇಶದ ಒಂದು ಪ್ರತಿ;

(ಜೆ) ರಾಜ್ಯದೊಳಗಿನ ಪೂರೈಕೆ ಎಂದು ಪರಿಗಣಿಸಲಾಗಿರುವ ಆದರೆ ತರುವಾಯವಾಗಿ ಅಂತರ–ರಾಜ್ಯ ಪೂರೈಕೆ ಎಂದಾದ ವ್ಯವಹಾರಗಳ ವಿವರಗಳನ್ನು ತೋರಿಸುವ ಒಂದು ವಿವರಪತ್ರ;

(ಕೆ) ತೆರಿಗೆಯ ಹೆಚ್ಚುವರಿ ಸಂದಾಯದ ಕಾರಣದಿಂದಾದ ಕ್ಲೇಮಿನ ಮೊತ್ತದ ವಿವರಗಳನ್ನು ತೋರಿಸುವ ಒಂದು ವಿವರಪತ್ರ;

(ಎಲ್) ಕ್ಲೇಮು ಮಾಡಿರುವ ಮರುಪಾವತಿಯ ಮೊತ್ತವು ಎರಡು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ, ಮರುಪಾವತಿ ಎಂದು ಕ್ಲೇಮು ಮಾಡಿರುವ ತೆರಿಗೆ, ಬಡ್ಡಿ ಅಥವಾ ಯಾವುದೇ ಇತರ ಮೊತ್ತದ ಹೊರೆಯನ್ನು ಯಾವೊಬ್ಬ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎನ್ನುವ ಒಂದ ಘೋಷಣಾ ಪತ್ರ:

ಪರಂತು, ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಅಥವಾ ಖಂಡ (ಡಿ) ಅಥವಾ ಖಂಡ (ಎಫ್)ನ ಅಡಿಯಲ್ಲಿ ವ್ಯಾಪ್ತವಾದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಒಂದು ಘೋಷಣೆಯನ್ನು ಒದಗಿಸಬೇಕಾದ ಅಗತ್ಯತೆಯಿರುವುದಿಲ್ಲ;

(ಎಮ್) ಕ್ಲೇಮು ಮಾಡಿರುವ ಮರುಪಾವತಿಯ ಮೊತ್ತವು ಎರಡು ಲಕ್ಷ ರೂಪಾಯಿಗಳನ್ನು ಮೀರಿದ್ದಲ್ಲಿ, ಮರುಪಾವತಿ ಎಂದು ಕ್ಲೇಮು ಮಾಡಿರುವ ತೆರಿಗೆ, ಬಡ್ಡಿ ಅಥವಾ ಯಾವುದೇ ಇತರ ಮೊತ್ತದ ಹೊರೆಯನ್ನು ಯಾವೊಬ್ಬ ಇತರ ವ್ಯಕ್ತಿಗೆ ವರ್ಗಾಯಿಸಿಲ್ಲ ಎಂದು ಚಾರ್ಟರ್ಡ್ ಅಕೌಂಟೆಂಟ್ ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್‌ನಿಂದ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ ಅನುಬಂಧ 2ರಲ್ಲಿ ನೀಡಿರುವ ಒಂದು ಪ್ರಮಾಣಪತ್ರ:

ಪರಂತು, ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಅಥವಾ ಖಂಡ (ಡಿ) ಅಥವಾ ಖಂಡ (ಎಫ್)ನ ಅಡಿಯಲ್ಲಿ ವ್ಯಾಪ್ತವಾದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಒಂದು ಘೋಷಣೆಯನ್ನು ಒದಗಿಸಬೇಕಾದ ಅಗತ್ಯತೆಯಿರುವುದಿಲ್ಲ;

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ–

(i) ಪ್ರಕರಣ 54ರ ಉಪಪ್ರಕರಣ (8)ರ ಖಂಡ (ಸಿ)ಯಲ್ಲಿ ಉಲ್ಲೇಖಿಸಿದ ಮರುಪಾವತಿಗಳ ಸಂದರ್ಭದಲ್ಲಿ, ಪದಾವಳಿಯಾದ **"ಬೆಲೆಪಟ್ಟಿ"** ಎಂದರೆ ಪ್ರಕರಣ 31ರಲ್ಲಿ ಒಳಗೊಂಡಿರುವ ಉಪಬಂಧಗಳನ್ನು ದೃಢೀಕರಿಸುವ ಬೆಲೆಪಟ್ಟಿ;

(ii) ಸ್ವೀಕರಿಸುವವನಿಂದ ತೆರಿಗೆಯ ಮೊತ್ತವನ್ನು ವಸೂಲು ಮಾಡಲಾಗಿದ್ದಲ್ಲಿ, ತೆರಿಗೆಯ ಹೊರೆಯು ಅಂತಿಮ ಗ್ರಾಹಕನಿಗೆ ವರ್ಗಾಯಿಸಲಾಗಿದೆ ಎಂದು ಪರಿಭಾವಿತವಾಗತಕ್ಕದ್ದು.

(3) ಅರ್ಜಿಯು, ಹೂಡುವಳಿ ತೆರಿಗೆ ಜಮೆಯ ಮರುಪಾವತಿಗೆ ಸಂಬಂಧಿಸಿದಲ್ಲಿ, ವಿದ್ಯುನ್ಮಾನ ಜಮೆ ಖಾತೆಗೆ, ಅರ್ಜಿದಾರನಿಂದ ಹಾಗೆ ಕ್ಲೇಮು ಮಾಡಿದ ಮರುಪಾವತಿಗೆ ಸಮಾನವಾದ ಒಂದು ಮೊತ್ತವನ್ನು ಖರ್ಚುಹಾಕತಕ್ಕದ್ದು.

(4) ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ 13)ರ ಪ್ರಕರಣ 16ರ ಉಪಪ್ರಕರಣ(3)ರ ಉಪಬಂಧಗಳಿಗೆ ಅನುಸಾರವಾಗಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡದೇ

ಸರಕು ಅಥವಾ ಸೇವೆಗಳ ಅಥವಾ ಅವುಗಳೆರೆಡರ ಶೂನ್ಯ–ದರ ಪೂರೈಕೆಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕೆಳಕಂಡ ಸೂತ್ರದ ಪ್ರಕಾರ ಮಂಜೂರು ಮಾಡತಕ್ಕದ್ದು–

ಮರುಪಾವತಿ ಮೊತ್ತ= (ಶೂನ್ಯ–ದರ ಸರಕುಗಳ ಪೂರೈಕೆಯ ವಹಿವಾಟು +ಶೂನ್ಯ–ದರ ಸೇವೆಗಳ ಪೂರೈಕೆಯ ವಹಿವಾಟು) x ನಿವ್ವಳ ಐಟಿಸಿ ÷ ಹೊಂದಿಸಿದ ಒಟ್ಟು ವಹಿವಾಟು

ಇದರಲ್ಲಿ,–

(ಎ) "ಮರುಪಾವತಿ ಮೊತ್ತ" ಎಂದರೆ, ಅಂಗೀಕರಿಸಬಹುದಾದ ಗರಿಷ್ಠ ಮರುಪಾವತಿ;

(ಬಿ) "ನಿವ್ವಳ ಐಟಿಸಿ" ಎಂದರೆ, ಸಂಬಂಧಿಸಿದ ಅವಧಿಯಲ್ಲಿನ ಹೂಡುವಳಿಗಳು ಮತ್ತು ಹೂಡುವಳಿ ಸೇವೆಗಳ ಮೇಲೆ ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ;

(ಸಿ) "ಶೂನ್ಯ–ದರ ಸರಕುಗಳ ಪೂರೈಕೆಯ ವಹಿವಾಟು" ಎಂದರೆ ಸಂಬಂಧಿಸಿದ ಅವಧಿಯಲ್ಲಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯರಹಿತವಾಗಿ ಮಾಡಿದ ಸರಕುಗಳ ಶೂನ್ಯ–ದರ ಪೂರೈಕೆ;

(ಡಿ) "ಶೂನ್ಯ–ದರ ಸೇವೆಗಳ ಪೂರೈಕೆಯ ವಹಿವಾಟು" ಎಂದರೆ ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ತೆರಿಗೆಯನ್ನು ಸಂದಾಯರಹಿತವಾಗಿ, ಕೆಳಕಂಡ ವಿಧಾನದಲ್ಲಿ ಲೆಕ್ಕಾಹಾಕಿ ಮಾಡಿದ ಸೇವೆಗಳ ಶೂನ್ಯ–ದರ ಪೂರೈಕೆ, ಎಂದರೆ:–

ಶೂನ್ಯ-ದರ ಸೇವೆಗಳ ಪೂರೈಕೆಯು, "ಶೂನ್ಯ–ದರ ಸೇವೆಗಳ ಪೂರೈಕೆಗಳಿಗಾಗಿ ಸಂಬಂಧಿಸಿದ ಅವಧಿಯಲ್ಲಿ ಸ್ವೀಕರಿಸಿರುವ ಮತ್ತು "ಶೂನ್ಯ–ದರ ಸೇವೆಗಳ ಪೂರೈಕೆಗಾಗಿ ಸ್ವೀಕರಿಸಿದ, ಅದಕ್ಕಾಗಿ ಸೇವೆಗಳ ಪೂರೈಕೆ ಸಂಬಂಧಿಸಿದ ಅವಧಿಯಲ್ಲಿ ಪೂರ್ಣಗೊಳ್ಳದಿರುವ, ಮುಂಗಡಗಳಷ್ಟು ಇಳಿಕೆ ಮಾಡಿ, ಪೂರೈಕೆಯು ಪೂರ್ಣಗೊಂಡಿರುವ ಅದಕ್ಕಾಗಿ ಸಂದಾಯವನ್ನು, ಸಂಬಂಧಿಸಿದ ಅವಧಿಗಿಂತ ಹಿಂದಿನ ಯಾವುದೇ ಅವಧಿಯಲ್ಲಿ "ಶೂನ್ಯ–ದರ ಸೇವೆಗಳ ಪೂರೈಕೆಗಾಗಿ ಮುಂಗಡವಾಗಿ ಸ್ವೀಕರಿಸಿರುವ ಸಂದಾಯಗಳ ಸಮಗ್ರವಾಗಿರುತ್ತದೆ;

(ಇ) "ಹೊಂದಿಸಿದ ಒಟ್ಟು ವಹಿವಾಟು" ಎಂದರೆ, ಸಂಬಂಧಿಸಿದ ಅವಧಿಯಲ್ಲಿನ "ಶೂನ್ಯ–ದರದ ಪೂರೈಕೆಗಳನ್ನು ಹೊರತುಪಡಿಸಿದ ವಿನಾಯಿತಿ ಪೂರೈಕೆಗಳನ್ನು ಹೊರತುಪಡಿಸಿ, ಪ್ರಕರಣ 2ರ [2][ಖಂಡ (112)]ರಲ್ಲಿ ಪರಿಭಾಷಿಸಿದಂತೆ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ವಹಿವಾಟು;

(ಎಫ್) "ಸಂಬಂಧಿಸಿದ ಅವಧಿ" ಎಂದರೆ ಕ್ಲೇಮನ್ನು ಸಲ್ಲಿಸಲಾಗಿರುವ ಅವಧಿ.

(5) ವಿಲೋಮ ಸುಂಕ ಸ್ವರೂಪದ ಕಾರಣದಿಂದಾಗಿ ಮರುಪಾವತಿಯ ಸಂದರ್ಭದಲ್ಲಿ, ಹೂಡುವಳಿ ತೆರಿಗೆ ಜಮೆಯ ಮರುಪಾವತಿಯನ್ನು ಕೆಳಕಂಡ ಸೂತ್ರದ ಪ್ರಕಾರ ಮಂಜೂರು ಮಾಡತಕ್ಕದ್ದು–

ಗರಿಷ್ಠ ಮರುಪಾವತಿ ಮೊತ್ತ= (ವಿಲೋಮ ದರದ ಸರಕುಗಳ ಪೂರೈಕೆಯ ವಹಿವಾಟು) x ನಿವ್ವಳ ಐಟಿಸಿ ÷ ಹೊಂದಿಸಿದ ಒಟ್ಟು ವಹಿವಾಟು–ಅಂಥ ವಿಲೋಮ ದರದ ಸರಕುಗಳ ಪೂರೈಕೆ ಮೇಲೆ ಸಂದಾಯ ಮಾಡಬೇಕಾದ ತೆರಿಗೆ.

ವಿವರಣೆ,– ಈ ಉಪ ನಿಯಮದ ಉದ್ದೇಶಗಳಿಗಾಗಿ ಪದಾವಳಿಯಾದ "ನಿವ್ವಳ ಐಟಿಸಿ" ಮತ್ತು "ಹೊಂದಿಸಿದ ಒಟ್ಟು ವಹಿವಾಟು" ಎನ್ನುವುದು ಉಪ ನಿಯಮ (4)ರಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**90. ಸ್ವೀಕೃತಿ.–** (1)ಅರ್ಜಿಯು, ವಿದ್ಯುನ್ಮಾನ ನಗದು ಖಾತೆಯಿಂದ ಮರುಪಾವತಿಯ ಕ್ಲೇಮಿಗೆ ಸಂಬಂಧಿಸಿದಲ್ಲಿ, ಮರುಪಾವತಿಗೆ ಕ್ಲೇಮನ್ನು ಸಲ್ಲಿಸಿದ ದಿನಾಂಕವನ್ನು ಸ್ಪಷ್ಟವಾಗಿ ಸೂಚಿಸಿದ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–02**ರಲ್ಲಿ ಅರ್ಜಿದಾರನಿಗೆ, ಸಾಮಾನ್ಯ ಪೋರ್ಟಲ್‌ನ ಮೂಲಕ, ವಿದ್ಯುನ್ಮಾನ ರೀತಿಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಪ್ರಕರಣ 54ರ ಉಪಪ್ರಕರಣ (7)ರಲ್ಲಿ ನಿರ್ದಿಷ್ಟಪಡಿಸಿದ ಕಾಲದ ಅವಧಿಯನ್ನು ಅಂಥ ಸಲ್ಲಿಕೆಯ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(2) ವಿದ್ಯುನ್ಮಾನ ನಗದು ಖಾತೆಯಿಂದ ಮರುಪಾವತಿಗಾಗಿ ಕ್ಲೇಮನ್ನು ಹೊರತುಪಡಿಸಿದ, ಮರುಪಾವತಿಯ ಅರ್ಜಿಯನ್ನು ಯುಕ್ತ ಅಧಿಕಾರಿಗೆ ರವಾನಿಸತಕ್ಕದ್ದು, ಅವರು, ಸದರಿ ಅರ್ಜಿಯನ್ನು, ಸಲ್ಲಿಸಿದ ಹದಿನೈದು ದಿನಗಳ ಅವಧಿಯ ಒಳಗಾಗಿ ಅದರ ಸಂಪೂರ್ಣತೆಗಾಗಿ ಸೂಕ್ಷ್ಮ ಪರಿಶೀಲನೆ ಮಾಡತಕ್ಕದ್ದು, ಅರ್ಜಿಯು ನಿಯಮ 89ರ ಉಪನಿಯಮ (2), (3) ಮತ್ತು (4)ರ ನಿಬಂಧನೆಗಳಿಗನುಸಾರವಾಗಿ ಪೂರ್ಣವಾಗಿರುವುದು ಕಂಡಬಂದಲ್ಲಿ, ಮರುಪಾವತಿಗೆ ಕ್ಲೇಮನ್ನು ಸಲ್ಲಿಸಿದ ದಿನಾಂಕವನ್ನು ಸ್ಪಷ್ಟವಾಗಿ

---

**[2]1ನೇ ಜುಲೈ 2017ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಬಿ/2017) ದಿನಾಂಕ 01–08–2017ರ ಮೂಲಕ "ಪ್ರಕರಣ2ರ ಉಪಪ್ರಕರಣ (112)" ಪದಗಳಿಗಾಗಿ ಪ್ರತಿಯೋಜಿಸಲಾಗಿದೆ.**

ಸೂಚಿಸಿದ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–02**ರಲ್ಲಿ ಅರ್ಜಿದಾರನಿಗೆ, ಸಾಮಾನ್ಯ ಪೋರ್ಟಲ್‌ನ ಮೂಲಕ, ವಿದ್ಯುನ್ಮಾನ ರೀತಿಯಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಪ್ರಕರಣ 54ರ ಉಪಪ್ರಕರಣ (7)ರಲ್ಲಿ ನಿರ್ದಿಷ್ಟಪಡಿಸಿದ ಕಾಲದ ಅವಧಿಯನ್ನು ಅಂಥ ಸಲ್ಲಿಕೆಯ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

(3) ಯಾವುದೇ ನ್ಯೂನ್ಯತೆಯನ್ನು ಗಮನಿಸಿದಲ್ಲಿ, ಯುಕ್ತ ಅಧಿಕಾರಿಯು, ಅರ್ಜಿದಾರನಿಗೆ ನ್ಯೂನ್ಯತೆಗಳನ್ನು**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–03**ರಲ್ಲಿ ಸಾಮಾನ್ಯ ಪೋರ್ಟಲ್‌ನ ಮೂಲಕ, ವಿದ್ಯುನ್ಮಾನ ರೀತಿಯಲ್ಲಿ, ಅಂಥ ನ್ಯೂನ್ಯತೆಗಳನ್ನು ಸರಿಪಡಿಸಿದ ನಂತರ ಒಂದು ಹೊಸ ಮರುಪಾವತಿ ಅರ್ಜಿಯನ್ನು ಸಲ್ಲಿಸುವಂತೆ ಆತನನ್ನು ಅಗತ್ಯಪಡಿಸಿ ತಿಳಿಸುವುದು.

(4) ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ಅಡಿಯಲ್ಲಿ, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–03**ರಲ್ಲಿ ಯಾವುದೇ ನ್ಯೂನ್ಯತೆಗಳನ್ನು ತಿಳಿಸಲಾಗಿದ್ದಲ್ಲಿ, ಉಪನಿಯಮ (3)ರ ಅಡಿಯಲ್ಲಿ ತಿಳಿಸಿದ ನ್ಯೂನ್ಯತೆಗಳೊಂದಿಗೆ ಈ ನಿಯಮದ ಅಡಿಯಲ್ಲಿ ತಿಳಿಸಲಾದ ನ್ಯೂನ್ಯತೆಗಳು ಎಂದು ಸಹ ಪರಿಭಾವಿಸತಕ್ಕದ್ದು.

(5) ಕೇಂದ್ರ ಸರಕು ಮತ್ತು ಸೇವೆಗಳ ನಿಯಮಗಳ ಅಡಿಯಲ್ಲಿ, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–03**ರಲ್ಲಿ ಯಾವುದೇ ನ್ಯೂನ್ಯತೆಗಳನ್ನು ತಿಳಿಸಲಾಗಿದ್ದಲ್ಲಿ, ಉಪನಿಯಮ (3)ರ ಅಡಿಯಲ್ಲಿ ತಿಳಿಸಿದ ನ್ಯೂನ್ಯತೆಗಳೊಂದಿಗೆ ಈ ನಿಯಮದ ಅಡಿಯಲ್ಲಿ ತಿಳಿಸಲಾದ ನ್ಯೂನ್ಯತೆಗಳು ಎಂದು ಪರಿಭಾವಿಸತಕ್ಕದ್ದು.

**91, ತಾತ್ಕಾಲಿಕ ಮರುಪಾವತಿಯ ಮಂಜೂರಾತಿ.–** (1)ಪ್ರಕರಣ 54ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ತಾತ್ಕಾಲಿಕ ಮರುಪಾವತಿಯನ್ನು, ಮರುಪಾವತಿಗೆ ಸಂಬಂಧಿಸಿದ ತೆರಿಗೆ ಅವಧಿಯ ನಿಕಟ ಪೂರ್ವವಾಗಿ ಬರುವ ಐದು ವರ್ಷಗಳ ಯಾವುದೇ ತೆರಿಗೆ ಅವಧಿಯ ಸಮಯದಲ್ಲಿ, ಬಚ್ಚಿಟ್ಟ ತೆರಿಗೆಯ ಮೊತ್ತ ಇನ್ನೂರ ಐವತ್ತು ಲಕ್ಷ ರೂಪಾಯಿಗಳನ್ನು ಮೀರಿರುವಲ್ಲಿ, ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿನ ಕಾನೂನಿನ ಅಡಿಯಲ್ಲಿನ ಯಾವುದೇ ಅಪರಾಧಕ್ಕಾಗಿ ಮರುಪಾವತಿಯನ್ನು ಕ್ಲೇಮು ಮಾಡಿರುವ ವ್ಯಕ್ತಿಯು ಅಭಿಯೋಜನೆಗೊಂಡಿಲ್ಲಬಾರದು ಎನ್ನುವ ಷರತ್ತಿಗೆ ಒಳಪಟ್ಟು ಮಂಜೂರು ಮಾಡತಕ್ಕದ್ದು.

(2) ಯುಕ್ತ ಅಧಿಕಾರಿಯು, ಕ್ಲೇಮನ್ನು ಮತ್ತು ಅದಕ್ಕೆ ಪೂರಕವಾಗಿ ಸಲ್ಲಿಸಲಾಗಿರುವ ಪುರಾವೆಯ ಸೂಕ್ಷ್ಮ ಪರಿಶೀಲನೆಯ ನಂತರ ಮತ್ತು ಮರುಪಾವತಿಯಂತೆ ಕ್ಲೇಮು ಮಾಡಿರುವ ಮೊತ್ತವು, ಪ್ರಕರಣ 54ರ ಉಪಪ್ರಕರಣ (6)ರ ಉಪಬಂಧಗಳಿಗೆ ಅನುಸಾರವಾಗಿ ಅರ್ಜಿದಾರನಿಗೆ ಉಪನಿಯಮ (1)ರ ಅಡಿಯಲ್ಲಿ ಬಾಕಿ ಇದೆ ಎಂದು ಮೇಲ್ನೋಟಕ್ಕೆ ಮನದಟ್ಟು ಮಾಡಿಕೊಂಡ ನಂತರ, ನಿಯಮ 90ರ ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿನ ಸ್ವೀಕೃತಿಯ ದಿನಾಂಕದಿಂದ ಏಳು ದಿನಗಳನ್ನು ಮೀರದ ಅವಧಿಯ ಒಳಗಾಗಿ ತಾತ್ಕಾಲಿಕ ಆಧಾರದ ಮೇಲೆ ಸದರಿ ಅರ್ಜಿದಾರನಿಗೆ ಬಾಕಿಯಿರುವ ಮರುಪಾವತಿಯ ಮೊತ್ತವನ್ನು ಮಂಜೂರು ಮಾಡಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–04**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು.

(3) ಯುಕ್ತ ಅಧಿಕಾರಿಯು, ಉಪನಿಯಮ (2)ರ ಅಡಿಯಲ್ಲಿ ಮಂಜೂರು ಮಾಡಿದ ಮೊತ್ತಕ್ಕಾಗಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸಂದಾಯದ ಸೂಚನೆಯನ್ನು ನೀಡತಕ್ಕದ್ದು ಮತ್ತು ಅದು, ಆತನ ನೋಂದಣಿ ವಿವರಗಳಲ್ಲಿ ನಮೂದಿಸಿದ ಅಥವಾ ಮರುಪಾವತಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿದಾರನ ಬ್ಯಾಂಕಿನ ಯಾವುದಾದರೊಂದು ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

**92. ಮರುಪಾವತಿ ಮಂಜೂರಾತಿಯ ಆದೇಶ.–** (1) ಅರ್ಜಿಯನು ಪರೀಕ್ಷಿಸಿದ ನಂತರ, ಯುಕ್ತ ಅಧಿಕಾರಿಯು, ಪ್ರಕರಣ 54ರ ಉಪಪ್ರಕರಣ (5)ರ ಅಡಿಯಲ್ಲಿ ಮರುಪಾವತಿಯು ಬಾಕಿಯಿದೆ ಮತ್ತು ಅರ್ಜಿದಾರನಿಗೆ ಸಂದಾಯ ಮಾಡಬಹುದು ಎನ್ನುವುದನ್ನು ಮನದಟ್ಟು ಮಾಡಿಕೊಂಡಲ್ಲಿ, ಹಕ್ಕುಳ ಅರ್ಜಿದಾರನಿಗೆ ಮರುಪಾವತಿಯ ಮೊತ್ತವನ್ನು ಮಂಜೂರು ಮಾಡಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಅದರಲ್ಲಿ, ಪ್ರಕರಣ 54ರ ಉಪಪ್ರಕರಣ (6)ರ ಅಡಿಯಲ್ಲಿ ತಾತ್ಕಾಲಿಕ ಆಧಾರದಲ್ಲಿ ಆತನಿಗೆ

ಮರುಪಾವತಿ ಮಾಡಲಾಗಿರುವ ಮೊತ್ತ ಏನಾದರು ಇದ್ದರೆ, ಅದನ್ನು, ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಬಾಕಿಯಿರುವ ಯಾವುದೇ ತಗಾದೆಗೆ ಪ್ರತಿಯಾಗಿ ಹೊಂದಿಸಿದ ಮೊತ್ತವನ್ನು ಮತ್ತು ಮರುಪಾವತಿ ಮಾಡಬಹುದಾದ ಉಳಿಕೆ ಮೊತ್ತವನ್ನು ನಮೂದಿಸಿ ಮಾಡತಕ್ಕದ್ದು.

ಪರಂತು, ಮರುಪಾವತಿಯ ಮೊತ್ತವನ್ನು, ಅಧಿನಿಯಮದ ಅಡಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವಯಾವುದೇ ಕಾನೂನಿನ ಅಡಿಯಲ್ಲಿ ಬಾಕಿಯಿರುವ ಯಾವುದೇ ತಗಾದೆಗೆ ಪ್ರತಿಯಾಗಿ ಸಂಪೂರ್ಣವಾಗಿ ಹೊಂದಾಣಿಕೆ ಮಾಡಿದ್ದಲ್ಲಿ, ಹೊಂದಾಣಿಕೆಯ ವಿವರವನ್ನು ನೀಡುವ ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–07**ರ ಭಾಗ–ಎನಲ್ಲಿ ನೀಡತಕ್ಕದ್ದು.

(2) ಯುಕ್ತ ಅಧಿಕಾರಿ ಅಥವಾ ಆಯುಕ್ತರು, ಮರುಪಾವತಿಯ ಮೊತ್ತ ಉಪಪ್ರಕರಣ (10) ಅಥವಾ, ಸಂದರ್ಭಾನುಸಾರವಾಗಿ, ಉಪಪ್ರಕರಣ (11)ರ ಉಪಬಂಧಗಳ ಅಡಿಯಲ್ಲಿ ತಡೆಹಿಡಿಯುವಿಕೆಗೆ ಬಾಧ್ಯವಾಗುತ್ತದೆ ಎಂದು ಮನದಟ್ಟು ಮಾಡಿಕೊಂಡಿದ್ದಲ್ಲಿ, ಒಂದು ಆದೇಶವನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–07**ರ ಭಾಗ–ಬಿನಲ್ಲಿ ಅಂಥ ಮರುಪಾವತಿಯನ್ನು ತಡೆಹಿಡಿಯುವುದಕ್ಕಾಗಿ ಕಾರಣಗಳನ್ನು ತಿಳಿಸಿ ಮಾಹಿತಿ ನೀಡತಕ್ಕದ್ದು.

(3) ಯುಕ್ತ ಅಧಿಕಾರಿಯು, ಮರುಪಾವತಿಯಾಗಿ ಕ್ಲೇಮು ಮಾಡಿರುವ ಮೊತ್ತದ ಪೂರ್ಣ ಅಥವಾ ಯಾವುದೇ ಭಾಗ, ಅಂಗೀಕಾರಾರ್ಹವಲ್ಲ ಅಥವಾ ಅರ್ಜಿದಾರನಿಗೆ ಸಂದಾಯ ಮಾಡುವಾಗಿಲ್ಲ ಎಂದು, ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ ಮನದಟ್ಟು ಮಾಡಿಕೊಂಡರೆ, ಆತನು, ಅರ್ಜಿದಾರನಿಗೆ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–08**ರಲ್ಲಿ ಒಂದು ಸೂಚನಾ ಪತ್ರವನ್ನು, ಅಂಥ ಸೂಚನಾ ಪತ್ರ ನೀಡಿದ ಹದಿನೈದು ದಿನಗಳ ಅವಧಿಯ ಒಳಗಾಗಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–09**ರಲ್ಲಿ ಉತ್ತರವನ್ನು ನೀಡುವಂತೆ ಆತನನ್ನು ಅಗತ್ಯಪಡಿಸಿ ನೀಡತಕ್ಕದ್ದು ಮತ್ತು ಉತ್ತರವನ್ನು ಪರಿಗಣಿಸಿದ ನಂತರ, ಮರುಪಾವತಿಯ ಮೊತ್ತವನ್ನು ಪೂರ್ಣವಾಗಿ ಅಥವಾ ಭಾಗವಾಗಿ ಮಂಜೂರು ಮಾಡಿ ಅಥವಾ ಸದರಿ ಮರುಪಾವತಿ ಕ್ಲೇಮನ್ನು ತಿರಸ್ಕರಿಸಿ **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಸದರಿ ಆದೇಶವನ್ನು ಅರ್ಜಿದಾರನಿಗೆ ವಿದ್ಯುನ್ಮಾನವಾಗಿ ಲಭ್ಯ ಮಾಡತಕ್ಕದ್ದು ಮತ್ತು ಉಪನಿಯಮ (1)ರ ಉಪಬಂಧಗಳು, ಮರುಪಾವತಿ ಕ್ಲೇಮು ಮಾಡಿರುವಷ್ಟರ ಮಟ್ಟಿಗೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು:

ಪರಂತು, ಅರ್ಜಿದಾರನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡದೇ ಯಾವುದೇ ಮರುಪಾವತಿಯ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

(4) ಯುಕ್ತ ಅಧಿಕಾರಿಯು, ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿ ಮರುಪಾವತಿ ಮಾಡಬಹುದಾದ ಮೊತ್ತವನ್ನು ಪ್ರಕರಣ 54ರ ಉಪಪ್ರಕರಣ (8)ರ ಅಡಿಯಲ್ಲಿ ಅರ್ಜಿದಾರನಿಗೆ ಸಂದಾಯ ಮಾಡಬಹುದು ಎಂದು ಮನದಟ್ಟು ಮಾಡಿಕೊಂಡರೆ, ಆತನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಮರುಪಾವತಿಯ ಮೊತ್ತಕ್ಕಾಗಿ**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸಂದಾಯದ ಸೂಚನೆಯನ್ನು ನೀಡತಕ್ಕದ್ದು ಮತ್ತು ಅದನ್ನು, ತನ್ನ ನೋಂದಣಿ ವಿವರಗಳಲ್ಲಿ ನಮೂದಿಸಿದ ಮತ್ತು ಮರುಪಾವತಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿದಾರನ ಬ್ಯಾಂಕಿನ ಯಾವುದಾದರೊಂದು ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

(5) ಯುಕ್ತ ಅಧಿಕಾರಿಯು, ಉಪನಿಯಮ (1) ಅಥವಾ ಉಪನಿಯಮ (2)ರ ಅಡಿಯಲ್ಲಿ ಮರುಪಾವತಿ ಮಾಡಬಹುದಾದ ಮೊತ್ತವನ್ನು ಪ್ರಕರಣ 54ರ ಉಪಪ್ರಕರಣ (8)ರ ಅಡಿಯಲ್ಲಿ ಅರ್ಜಿದಾರನಿಗೆ ಸಂದಾಯ ಮಾಡಲಾಗುವುದಿಲ್ಲ ಎಂದು ಮನದಟ್ಟು ಮಾಡಿಕೊಂಡರೆ, ಆತನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–06**ರಲ್ಲಿ ಒಂದು ಆದೇಶವನ್ನು ಮಾಡತಕ್ಕದ್ದು ಮತ್ತು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ಜಮೆಗೊಳಿಸಬೇಕಾದ ಮರುಪಾವತಿಯ ಮೊತ್ತಕ್ಕಾಗಿ**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸೂಚನೆಯನ್ನು ನೀಡತಕ್ಕದ್ದು.

**93. ತಿರಸ್ಕೃತ ಮರುಪಾವತಿ ಕ್ಲೇಮು ಮೊತ್ತದ ಜಮೆ.–** (1) ನಿಯಮ 90ರ ಉಪನಿಯಮ (3)ರ ಅಡಿಯಲ್ಲಿ ಯಾವುದೇ ನ್ಯೂನ್ಯತೆಗಳನ್ನುತಿಳಸಲಾಗಿದ್ದಲ್ಲಿ, ನಿಯಮ 89ರ ಉಪನಿಯಮ (3)ರ ಅಡಿಯಲ್ಲಿ ಖರ್ಚುಹಾಕಲಾದ ಮೊತ್ತವನ್ನು ವಿದ್ಯುನ್ಮಾನ ಜಮೆ ಖಾತೆಗೆ ಪುನರ್–ಜಮೆಗೊಳಿಸತಕ್ಕದ್ದು.

(2) ಮರುಪಾವತಿಯಾಗಿ ಕ್ಲೇಮು ಮಾಡಿದ ಯಾವುದೇ ಮೊತ್ತವನ್ನು ನಿಯಮ 92ರ ಅಡಿಯಲ್ಲಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ತಿರಸ್ಕರಿಸಿದ್ದಲ್ಲಿ, ತಿರಸ್ಕರಣೆಯಷ್ಟರ ಮಟ್ಟಿಗೆ ಖರ್ಚುಹಾಕಲಾದ ಮೊತ್ತವನ್ನು, **ನಮೂನೆ ಜಿಎಸ್‌ಟಿ ಪಿಎಂಟಿ–03**ರಲ್ಲಿ ಒಂದು ಆದೇಶದ ಮೂಲಕ ವಿದ್ಯುನ್ಮಾನ ಜಮೆ ಖಾತೆಗೆ ಪುನರ್–ಜಮೆಗೊಳಿಸತಕ್ಕದ್ದು.

ವಿವರಣೆ.– ಈ ನಿಯಮದ ಉದ್ದೇಶಗಳಿಗಾಗಿ, ಅಪೀಲು ಅಂತಿಮವಾಗಿ ತಿರಸ್ಕೃತಗೊಂಡರೆ ಅಥವಾ ಕ್ಲೇಮುದಾರ ಯುಕ್ತ ಅಧಿಕಾರಿಗೆ ಆತನು ಅಪೀಲನ್ನು ಸಲ್ಲಿಸುವುದಿಲ್ಲ ಎನ್ನುವ ಒಂದು ವಾಗ್ದಾನವನ್ನು ನೀಡಿದರೆ, ಮರುಪಾವತಿ ತಿರಸ್ಕೃತಗೊಂಡಿದೆ ಎಂದು ಪರಿಭಾವಿಸತಕ್ಕದ್ದು.

**94. ವಿಳಂಬ ಮರುಪಾವತಿಗಳ ಮೇಲಿನ ಬಡ್ಡಿ ಮಂಜೂರಾತಿಯ ಆದೇಶ.–** ಯಾವುದೇ ಬಡ್ಡಿ, ಅರ್ಜಿದಾರನಿಗೆ ಪ್ರಕರಣ 56ರ ಅಡಿಯಲ್ಲಿ ಬಾಕಿಯಿರುವಲ್ಲಿ ಮತ್ತು ಸಂದಾಯ ಮಾಡಬೇಕಿದ್ದಲ್ಲಿ, ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–05**ರಲ್ಲಿ ಸಂದಾಯದ ಸೂಚನೆಯೊಂದಿಗೆಒಂದು ಆದೇಶವನ್ನು ಮಾಡತಕ್ಕದ್ದು, ಅದರಲ್ಲಿ, ವಿಳಂಬವಾದ ಮರುಪಾವತಿಯ ಮೊತ್ತ, ಬಡ್ಡಿಯನ್ನು ಸಂದಾಯ ಮಾಡಬೇಕಾದ ವಿಳಂಬದ ಅವಧಿ ಮತ್ತು ಸಂದಾಯ ಮಾಡಬೇಕಾದ ಬಡ್ಡಿಯ ಮೊತ್ತವನ್ನು ನಿರ್ದಿಷ್ಟ ಪಡಿಸತಕ್ಕದ್ದು, ಮತ್ತು ಅಂಥ ಬಡ್ಡಿಯ ಮೊತ್ತವನ್ನು ಆತನ ನೋಂದಣಿ ವಿವರಗಳಲ್ಲಿ ನಮೂದಿಸಿದ ಮತ್ತು ಮರುಪಾವತಿಯ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿದಾರನ ಬ್ಯಾಂಕಿನ ಯಾವುದಾದರೊಂದು ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

**95. ಕೆಲವು ವ್ಯಕ್ತಿಗಳಿಗೆ ತೆರಿಗೆಯ ಮರುಪಾವತಿ.–** (1) ಪ್ರಕರಣ 55ರ ಅಡಿಯಲ್ಲಿ ನೀಡಿದ ಅಧಿಸೂಚನೆಯ ಪ್ರಕಾರ ತನ್ನ ಒಳಮುಖ ಪೂರೈಕೆಗಳ ಮೇಲೆ ಆತನಿಂದ ಸಂದಾಯ ಮಾಡಿದ ತೆರಿಗೆಯ ಮರುಪಾವತಿಯ ಕ್ಲೇಮಿಗೆ ಅರ್ಹನಿರುವ ಯಾವೊಬ್ಬ ವ್ಯಕ್ತಿಯು, ಸಂವಾದಿ ಪೂರೈಕೆದಾರರಿಂದ**ನಮೂನೆ ಜಿಎಸ್‌ಟಿಆರ್–1**ರಲ್ಲಿ ಹೊರಮುಖ ಪೂರೈಕೆಗಳಿಗಾಗಿ ಒದಗಿಸಿದ ವಿವರಪತ್ರದ ಆಧಾರದಲ್ಲಿ ಸಿದ್ಧಪಡಿಸಿದ, **ನಮೂನೆ ಜಿಎಸ್‌ಟಿಆರ್ 11**ರಲ್ಲಿನ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳ ವಿವರಪತ್ರದ ಜೊತೆಯಲ್ಲಿ,ಮರುಪಾವತಿಗಾಗಿ ಅರ್ಜಿಯನ್ನು,**ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–10**ರಲ್ಲಿ, ಪ್ರತಿ ತ್ರೈಮಾಸಿಕಕ್ಕೆ ಒಂದು ಬಾರಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಸಲ್ಲಿಸತಕ್ಕದ್ದು.

(2) ಮರುಪಾವತಿಯ ಅರ್ಜಿಯನ್ನು ಸ್ವೀಕರಿಸುದುದಕ್ಕಾಗಿ ಒಂದು ಸ್ವೀಕೃತಿಯನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–02**ರಲ್ಲಿ ನೀಡತಕ್ಕದ್ದು.

(3) ಅರ್ಜಿದಾರನಿಂದ ಸಂದಾಯ ಮಾಡಿದ ತೆರಿಗೆಯ ಮರುಪಾತಿಯು ಕೆಳಕಂಡಂತಿದ್ದರೆ ಲಭ್ಯವಿರತಕ್ಕದ್ದು–

(ಎ)ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಪೂರೈಕೆಗಳನ್ನು, ಒಬ್ಬ ನೋಂದಾಯಿತ ವ್ಯಕ್ತಿಯಿಂದ ತೆರಿಗೆ ಬೆಲೆಪಟ್ಟಿಗೆ ಪ್ರತಿಯಾಗಿ ಸ್ವೀಕರಿಸಿದ್ದಾಗ ಮತ್ತು ಒಂದು ತೆರಿಗೆ ಬೆಲೆಪಟ್ಟಿಯ ಅಡಿಯಲ್ಲಿ ವ್ಯಾಪ್ತವಾದ ಪೂರೈಕೆಯ ಬೆಲೆಯು, ತೆರಿಗೆ ಸಂದಾಯ ಮಾಡಿರುವುದು ಏನಾದರು ಇದ್ದರೆ, ಅದನ್ನು ಬಿಟ್ಟು ಐದು ಸಾವಿರ ರೂಪಾಯಿಗಳನ್ನು ಮೀರಿದ್ದಾಗ;

(ಬಿ) ಅರ್ಜಿದಾರನ ಹೆಸರು ಮತ್ತು ಸರಕು ಅಥವಾ ಸೇವೆಗಳ ತೆರಿಗೆ ಗುರುತಿನ ಸಂಖ್ಯೆ ಅಥವಾ ವಿಶಿಷ್ಟ ಗುರುತಿನ ಸಂಖ್ಯೆ ಬೆಲೆಪಟ್ಟಿಯಲ್ಲಿ ನಮೂದಾಗಿದ್ದಾಗ; ಮತ್ತು

(ಸಿ) ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರೇ ನಿರ್ಬಂಧಗಳು ಮತ್ತು ಷರತ್ತುಗಳನ್ನು ಪೂರೈಸಿದ್ದಾಗ.

(4) ನಿಯಮ 92ರ ಉಪಬಂಧಗಳು, ಈ ನಿಮಯದ ಅಡಿಯಲ್ಲಿ ಮರುಪಾವತಿಯ ಮಂಜೂರಾತಿ ಮತ್ತು ಸಂದಾಯಕ್ಕಾಗಿ, ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

(5) ಒಂದು ಕೌಲು ಅಥವಾ ಇತರೇ ಅಂತರರಾಷ್ಟ್ರೀಯ ಒಪ್ಪಂದ, ಅದರಲ್ಲಿ ರಾಷ್ಟ್ರಪತಿ ಅಥವಾ ಭಾರತ ಸರ್ಕಾರ ಪಕ್ಷಕಾರರಾಗಿರುವುದರಲ್ಲಿನ ಒಂದು ವ್ಯಕ್ತ ಉಪಬಂಧವು, ಈ ಅಧ್ಯಾಯದ ನಿಯಮಗಳ ಉಪಬಂಧಗಳೊಂದಿಗೆ ಅಸಂಗತವಾಗಿದ್ದಲ್ಲಿ, ಅಂಥ ಕೌಲು ಅಥವಾ ಅಂತರರಾಷ್ಟ್ರೀಯ ಒಪ್ಪಂದ ಚಾಲ್ತಿಯಲ್ಲಿರತಕ್ಕದ್ದು.

**96. ಭಾರತದ ಹೊರಗಡೆಗೆ ರಫ್ತಾದ ಸರಕುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿ.–** (1) ಒಬ್ಬ ರಫ್ತುದಾರನಿಂದ ಸಲ್ಲಿಸಲಾದ ಶಿಪ್ಪಿಂಗ್ ಬಿಲ್‌ನ್ನು ಭಾರತದ ಹೊರಗಡೆಗೆ ರಫ್ತಾದ ಸರಕುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿಗಾಗಿ ಸಲ್ಲಿಸಲಾದ ಅರ್ಜಿ ಎಂದು ಪರಿಭಾವಿಸತಕ್ಕದ್ದು ಮತ್ತು ಅಂಥ ಅರ್ಜಿಯನ್ನು ಕೆಳಕಂಡತೆ ಇರುವಾಗ ಮಾತ್ರ ಸಲ್ಲಿಸಲಾಗಿದೆ ಎಂದು ಪರಿಭಾವಿಸತಕ್ಕದ್ದು:–

(ಎ) ರಫ್ತು ಸರಕುಗಳನ್ನು ಸಾಗಿಸುತ್ತಿರುವ ಸಾಗಾಣಿಕೆ ವಾಹನದ ಪ್ರಭಾರದಲ್ಲಿನ ವ್ಯಕ್ತಿಯು, ಶಿಪ್ಪಿಂಗ್ ಬಿಲ್‌ಗಳ ಅಥವಾ ರಫ್ತು ಬಿಲ್‌ಗಳ ಸಂಖ್ಯೆ ಮತ್ತು ದಿನಾಂಕವನ್ನು ಹೊಂದಿರುವ ರಫ್ತು ಪ್ರಣಾಳಿಕೆ ಅಥವಾ ಒಂದು ರಫ್ತು ವರದಿಯನ್ನು ಯುಕ್ತವಾಗಿ ಸಲ್ಲಿಸಿದ್ದಾಗ; ಮತ್ತು

(ಬಿ) ಅರ್ಜಿದಾರನು, ಒಂದು ಸಿಂಧುವಾದ ರಿಟರ್ನ್‌ನ್ನು **ನಮೂನೆ ಜಿಎಸ್‌ಟಿಆರ್–3**ರಲ್ಲಿ [3] [ಅಥವಾ ಸಂದರ್ಭಾನುಸಾರವಾಗಿ **ನಮೂನೆ ಜಿಎಸ್‌ಟಿಆರ್–3**ಬಿಯಲ್ಲಿ]ಒದಗಿಸಿದ್ದಾಗ;

(2) **ನಮೂನೆ ಜಿಎಸ್‌ಟಿಆರ್–1**ರಲ್ಲಿ ಒಳಗೊಂಡಿರುವ ಸಂಬಂಧಿಸಿದ ರಫ್ತು ಬೆಲೆಪಟ್ಟಿಗಳ ವಿವರಗಳನ್ನು, ಸಾಮಾನ್ಯ ಪೋರ್ಟಲ್‌ನ ಮೂಲಕ ಸೀಮಾಸುಂಕ ಇಲಾಖೆಯಿಂದ ಹೆಸರಿಸಲಾದ ಸಿಸ್ಟಂಗೆ ಪ್ರಸರಣಗೊಳಿಸತಕ್ಕದ್ದು ಮತ್ತು ಸದರಿ ಸಿಸ್ಟಂ ಸಾಮಾನ್ಯ ಪೋರ್ಟಲ್‌ಗೆ, ಸದರಿ ಬೆಲೆಪಟ್ಟಿಗಳಿಂದ ವ್ಯಾಪ್ತವಾಗಿರುವ ಆ ಸರಕುಗಳು ಭಾರತದ ಹೊರಗಡೆಗೆ ರಫ್ತಾಗಿವೆ ಎನ್ನುವ ಒಂದು ಧೃಢೀಕರಣವನ್ನು ವಿದ್ಯುನ್ಮಾನ ರೀತಿಯಲ್ಲಿ ಪ್ರಸರಣಗೊಳಿಸತಕ್ಕದ್ದು.

[4][ ಪರಂತು ಒಂದು ತೆರಿಗೆ ಅವಧಿಗಾಗಿ **ನಮೂನೆ ಜಿಎಸ್‌ಟಿಆರ್–1ರಲ್ಲಿ** ಹೊರಮುಖ ಪೂರೈಕೆಯ ವಿವರಗಳನ್ನು ಒದಗಿಸುವುದಕ್ಕಾಗಿ ಇರುವ ದಿನಾಂಕವನ್ನು, ಅಧಿನಿಯಮದ ಪ್ರಕರಣ 37ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ವಿಸ್ತರಿಸಲಾಗಿದ್ದಲ್ಲಿ, **ನಮೂನೆ ಜಿಎಸ್‌ಟಿಆರ್–3ಬಿ**ಯಲ್ಲಿ ರಿಟರ್ನ್‌ನ್ನು ಒದಗಿಸಲಾದ ನಂತರ ಪೂರೈಕೆದಾರನು **ನಮೂನೆ ಜಿಎಸ್‌ಟಿಆರ್–1ರ** ಕೋಷ್ಟಕ 6ಎನಲ್ಲಿ ನಿರ್ದಿಷ್ಟಪಡಿಸಿದಂತೆ ರಫ್ತುಗಳಿಗೆ ಸಂಬಂಧಿಸಿದ ವಿವರವನ್ನು ಒದಗಿಸತಕ್ಕದ್ದು ಮತ್ತು ಅದು ಸಾಮಾನ್ಯ ಪೋರ್ಟಲ್‌ನಿಂದ ವಿದ್ಯುನ್ಮಾನ ರೀತಿಯಲ್ಲಿ ಸೀಮಾಸುಂಕ ಇಲಾಖೆಯಿಂದ ವಿನ್ಯಾಸಗೊಳಿಸಲಾದ ಸಿಸ್ಟಂಗೆ ಪ್ರಸರಣಗೊಳ್ಳತಕ್ಕದ್ದು:

ಮತ್ತು ಪರಂತು, ಮೊದಲನೇ ಪರಂತುಕದ ಅಡಿಯಲ್ಲಿ ಕೋಷ್ಟಕ 6ಎನಲ್ಲಿ ಒದಗಿಸಿದ ಮಾಹಿತಿಯು, ಸದರಿ ತೆರಿಗೆ ಅವಧಿಗೆ **ನಮೂನೆ ಜಿಎಸ್‌ಟಿಆರ್–1** ರಲ್ಲಿ ಸ್ವಯಂ–ರಚಿತಗೊಳ್ಳತಕ್ಕದ್ದು.]

(3) ಸಾಮಾನ್ಯ ಪೋರ್ಟಲ್‌ನಿಂದ **ನಮೂನೆ ಜಿಎಸ್‌ಟಿಆರ್–3** [5] [ಅಥವಾ ಸಂದರ್ಭಾನುಸಾರವಾಗಿ **ನಮೂನೆ ಜಿಎಸ್‌ಟಿಆರ್–3**ಬಿಯಲ್ಲಿ]ಒಂದು ಸಿಂಧುವಾದ ರಿಟರ್ನ್‌ನ್ನು ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಸೀಮಾಸುಂಕದಿಂದ ಹೆಸರಿಸಲಾದ ಸಿಸ್ಟಂ, ಮರುಪಾವತಿಯ ಕ್ಲೇಮನ್ನು ಪ್ರಕ್ರಿಯೆಗೊಳಿಸತಕ್ಕದ್ದು ಮತ್ತು ಪ್ರತಿ ಶಿಪ್ಪಿಂಗ್ ಬಿಲ್ ಅಥವಾ

---

[3]**01–07–2017ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಎ/2017) ದಿನಾಂಕ 05–07–2017ರ ಮೂಲಕ ಸೇರಿಸಲಾಗಿದೆ.**

[4]**ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಐ/2017) ದಿನಾಂಕ 13–12–2017ರ ಮೂಲಕ ಈ ಪರಂತುಕಗಳನ್ನುಸೇರಿಸಲಾಗಿದೆ.**

[5]**01–07–2017ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಎ/2017) ದಿನಾಂಕ 05–07–2017ರ ಮೂಲಕ ಸೇರಿಸಲಾಗಿದೆ.**

ರಫ್ತುವಿನ ಬಿಲ್‌ಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ಏಕೀಕೃತ ತೆರಿಗೆಗೆ ಸಮಾನಾದ ಒಂದು ಮೊತ್ತವನ್ನು ತನ್ನ ನೋಂದಣಿ ವಿವರಗಳಲ್ಲಿ ನಮೂದಿಸಿದ ಮತ್ತು ಸೀಮಾ ಸುಂಕ ಪ್ರಾಧಿಕಾರಗಳಿಗೆ ತಿಳಿಸಲಾಗಿರುವಂತೆ, ಅರ್ಜಿದಾರನ ಬ್ಯಾಂಕಿನ ಖಾತೆಗೆ ವಿದ್ಯುನ್ಮಾನವಾಗಿ ಜಮೆಗೊಳಿಸತಕ್ಕದ್ದು,

(4) ಮರುಪಾವತಿಗಾಗಿ ಕ್ಲೇಮನ್ನು ಕೆಳಕಂಡಂತೆ ಇದ್ದಲ್ಲಿ ತಡೆಹಿಡಿಯತಕ್ಕದ್ದು,-

(ಎ) ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಕ್ಷೇತ್ರವ್ಯಾಪ್ತಿಯ ಆಯುಕ್ತರಿಂದ ಮರುಪಾತಿಯ ಸಂದಾಯವನ್ನು, ಪ್ರಕರಣ 54ರ ಉಪಪ್ರಕರಣ (10) ಅಥವಾ ಉಪಪ್ರಕರಣ (11)ರ ಉಪಬಂಧಗಳಿಗೆ ಅನುಸಾರವಾಗಿ ವ್ಯಕ್ತಿ ಮರುಪಾವತಿಯನ್ನು ಕ್ಲೇಮು ಮಾಡುತ್ತಿರುವ ಕಾರಣದಿಂದಾಗಿ ತಡೆಹಿಡಿಯುವಂತೆ ಕೋರಿಕೆಯನ್ನು ಸ್ವೀಕರಿಸಿದ್ದಲ್ಲಿ; ಅಥವಾ

(ಬಿ) ಸೀಮಾಸುಂಕದ ಯುಕ್ತ ಅಧಿಕಾರಿಯು, ಸರಕುಗಳು ಸೀಮಾಸುಂಕಗಳ ಅಧಿನಿಯಮ, 1962ರ ಉಪಬಂಧಗಳನ್ನು ಉಲ್ಲಂಘಿಸಿ ಸರಕುಗಳನ್ನು ರಫ್ತು ಮಾಡಲಾಗಿದೆ ಎಂದು ನಿರ್ಧರಿಸಿದ್ದಲ್ಲಿ.

(5) ಉಪನಿಯಮ (4)ರ ಖಂಡ (ಎ)ಯ ಉಪಬಂಧಗಳಿಗೆ ಅನುಸಾರವಾಗಿ ಮರುಪಾವತಿಯನ್ನು ತಡೆಹಿಡಿದಿದ್ದಲ್ಲಿ, ಸೀಮಾಸುಂಕ ಠಾಣೆಯಲ್ಲಿರುವ ಏಕೀಕೃತ ತೆರಿಗೆಯ ಯುಕ್ತ ಅಧಿಕಾರಿಯು ಅರ್ಜಿದಾರನಿಗೆ ಮತ್ತು ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಕ್ಷೇತ್ರವ್ಯಾಪ್ತಿಯ ಆಯುಕ್ತರಿಗೆ ತಿಳಿಸತಕ್ಕದ್ದು, ಮತ್ತು ಅಂಥ ತಿಳುವಳಿಕೆಯ ಒಂದು ಪ್ರತಿಯನ್ನು ಸಾಮಾನ್ಯ ಪೋರ್ಟಲ್‌ಗೆ ಪ್ರಸರಣಗೊಳಿಸತಕ್ಕದ್ದು.

(6) ಉಪನಿಯಮ (5)ರ ಅಡಿಯಲ್ಲಿ ತಿಳುವಳಿಕೆ ಪತ್ರವನ್ನು ಪ್ರಸರಣಗೊಳಿಸಿದ ತರುವಾಯ, ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಯುಕ್ತ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ-07**ರ ಭಾಗ ಬಿನಲ್ಲಿ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(7) ಅರ್ಜಿದಾರನು, ಉಪನಿಯಮ (4)ರ ಖಂಡ (ಎ)ಯ ಅಡಿಯಲ್ಲಿ ತಡೆಹಿಡಿದ ಮರುಪಾವತಿಯ ಮೊತ್ತಕ್ಕೆ ಹಕ್ಕುಳ್ಳವನಾಗಿರುವಲ್ಲಿ,ಕೇಂದ್ರ ತೆರಿಗೆ, ರಾಜ್ಯ ತೆರಿಗೆ ಅಥವಾ ಸಂದರ್ಭಾನುಸಾರವಾಗಿ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಅಧಿಕಾರಿಯು, **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ-06**ರಲ್ಲಿ ಒಂದು ಆದೇಶವನ್ನು ಹೊರಡಿಸಿದ ನಂತರ ಮರುಪಾವತಿಯ ಮೊತ್ತವನ್ನು ನೀಡಲು ಮುಂದುವರಿಯತಕ್ಕದ್ದು.

(8) ಕೇಂದ್ರ ಸರ್ಕಾರವು, ಈ ಸಂಬಂಧದಲ್ಲಿ ಅಧಿಸೂಚಿಸಬಹುದಾದ ಅಂಥ ಸರಕುಗಳ ವರ್ಗಕ್ಕಾಗಿ, ಭೂತಾನ್‌ಗೆ ರಫ್ತು ಮಾಡಲಾದುವುಗಳ ಮೇಲೆ ಏಕೀಕೃತ ತೆರಿಗೆಯ ಮರುಪಾವತಿಯನ್ನು,ಭೂತಾನ್ ಸರ್ಕಾರಕ್ಕೆ ಸಂದಾಯ ಮಾಡಬಹುದು ಮತ್ತು ಅಂಥ ಮರುಪಾವತಿಯನು ಭೂತಾನ್ ಸರ್ಕಾರಕ್ಕೆ ಸಂದಾಯ ಮಾಡಿದ್ದಲ್ಲಿ, ರಫ್ತುದಾರನಿಗೆ ಏಕೀಕೃತ ತೆರಿಗೆಯ ಯಾವುದೇ ಮರುಪಾವತಿಯನ್ನು ಸಂದಾಯ ಮಾಡತಕ್ಕದ್ದಲ್ಲ.

[6][**96ಎ. ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ಸರಕು ಅಥವಾ ಸೇವೆಗಳ ರಫ್ತುವಿನ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ಮರುಪಾವತಿ.**–(1) ಏಕೀಕೃತ ತೆರಿಗೆಯನ್ನು ಸಂದಾಯ ಮಾಡದೆ ಸರಕು ಅಥವಾ ಸೇವೆಗಳ ರಫ್ತುವಿನ ಪೂರೈಕೆಯ ಆಯ್ಕೆಯನ್ನು ಉಪಯೋಗಿಸುವ ಯಾವೊಬ್ಬ ನೋಂದಾಯಿತ ವ್ಯಕ್ತಿಯು, ರಫ್ತಿಗೆ ಮುನ್ನ, ಕ್ಷೇತ್ರ ವ್ಯಾಪ್ತಿಯ ಆಯುಕ್ತರಿಗೆ, ಪ್ರಕರಣ 50ರ ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಬಡ್ಡಿಯ ಜೊತೆಯಲ್ಲಿ ಬಾಕಿಯಿರುವ ತೆರಿಗೆಯನ್ನು ಕೆಳಕಂಡ ಅವಧಿಯ ಒಳಗಾಗಿ ಸಂದಾಯ ಮಾಡುತ್ತೇನೆ ಎಂದು ತನ್ನನ್ನು ಬದ್ಧಗೊಳಿಸಿಕೊಂಡು, ಒಂದು ಬಾಂಡ್ ಅಥವಾ ವಾಗ್ದಾನ ಪತ್ರವನ್ನು **ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–11**ರಲ್ಲಿ ಒದಗಿಸತಕ್ಕದ್ದು–

(ಎ) ಸರಕುಗಳು ಭಾರತದ ಹೊರಗಡೆ ರಫ್ತಾಗಿದ್ದರೆ, ರಫ್ತಿಗಾಗಿ ಬೆಲೆಪಟ್ಟಿಯನ್ನು ನೀಡಲಾದ ದಿನಾಂಕದಿಂದ ಮೂರು ತಿಂಗಳು ಮುಗಿದ ನಂತರದ ಹದಿನೈದು ದಿನಗಳು [7][ಅಥವಾ ಆಯುಕ್ತರಿಂದ ಅನುಮತಿಸಬಹುದಾದ ಅಂಥ ಮುಂದುವರಿದ ಅವಧಿ]; ಅಥವಾ

(ಬಿ) ರಫ್ತುದಾರನಿಂದ ಪರಿವರ್ತನೀಯ ವಿದೇಶಿ ವಿನಿಮಯದಲ್ಲಿ ಅಂಥ ಸೇವೆಗಳ ಸಂದಾಯವನ್ನು ಸ್ವೀಕರಿಸಿಲ್ಲದಿದ್ದರೆ, ರಫ್ತಿಗಾಗಿ ಬೆಲೆಪಟ್ಟಿಯನ್ನು ನೀಡಲಾದ ದಿನಾಂಕದಿಂದ ಒಂದು ವರ್ಷ ಅಥವಾ ಆಯುಕ್ತರಿಂದ ಅನುಮತಿಸಬಹುದಾದ ಅಂಥ ಮುಂದಿನ ಅವಧಿಯು ಮುಗಿದ ನಂತರದ ಹದಿನೈದು ದಿನಗಳು.

(2) ಸಾಮಾನ್ಯ ಪೋರ್ಟಲ್‌ನಲ್ಲಿ ಒದಗಿಸಿದ ನಮೂನೆ ಜಿಎಸ್‌ಟಿಆರ್–1ರಲ್ಲಿ ಒಳಗೊಂಡಿರುವ ರಫ್ತು ಬೆಲೆಪಟ್ಟಿಯ ವಿವರಗಳನ್ನು, ವಿದ್ಯುನ್ಮಾನ ರೀತಿಯಲ್ಲಿ ಸೀಮಾಸುಂಕಗಳ ಇಲಾಖೆಯಿಂದ ಹೆಸರಿಸಿದ ವ್ಯವಸ್ಥೆಗೆ ಪ್ರಸರಣ ಮಾಡತಕ್ಕದ್ದು ಮತ್ತು ಸದರಿ ಬೆಲೆಪಟ್ಟಿಗಳಿಂದ ವ್ಯಾಪ್ತವಾದ ಸರಕುಗಳನ್ನು ಭಾರತದ ಹೊರಗಡೆ ರಫ್ತು ಮಾಡಲಾಗಿದೆ ಎನ್ನುವ ಒಂದು ಖಾತರಿಯನ್ನು ಸದರಿ ಸಿಸ್ಟಂನಿಂದ ಸಾಮಾನ್ಯ ಪೋರ್ಟಲ್‌ಗೆ ವಿದ್ಯುನ್ಮಾನ ರೀತಿಯಲ್ಲಿ ಪ್ರಸರಣಗೊಳಿಸತಕ್ಕದ್ದು.

[8][ ಪರಂತು ಒಂದು ತೆರಿಗೆ ಅವಧಿಗಾಗಿ **ನಮೂನೆ ಜಿಎಸ್‌ಟಿಆರ್–1ರಲ್ಲಿ** ಹೊರಮುಖ ಪೂರೈಕೆಯ ವಿವರಗಳನ್ನು ಒದಗಿಸುವುದಕ್ಕಾಗಿ ಇರುವ ದಿನಾಂಕವನ್ನು, ಅಧಿನಿಯಮದ ಪ್ರಕರಣ 37ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ವಿಸ್ತರಿಸಲಾಗಿದ್ದಲ್ಲಿ, **ನಮೂನೆ ಜಿಎಸ್‌ಟಿಆರ್–3ಬಿ**ಯಲ್ಲಿ ರಿಟರ್ನನ್ನು ಒದಗಿಸಲಾದ ನಂತರ ಪೂರೈಕೆದಾರನು **ನಮೂನೆ ಜಿಎಸ್‌ಟಿಆರ್–1ರ** ಕೋಷ್ಟಕ 6ಎನಲ್ಲಿ ನಿರ್ದಿಷ್ಟಪಡಿಸಿದಂತೆ ರಫ್ತುಗಳಿಗೆ ಸಂಬಂಧಿಸಿದ ವಿವರವನ್ನು ಒದಗಿಸತಕ್ಕದ್ದು ಮತ್ತು ಅದು ಸಾಮಾನ್ಯ ಪೋರ್ಟಲ್‌ನಿಂದ ವಿದ್ಯುನ್ಮಾನ ರೀತಿಯಲ್ಲಿ ಸೀಮಾಸುಂಕ ಇಲಾಖೆಯಿಂದ ವಿನ್ಯಾಸಗೊಳಿಸಲಾದ ಸಿಸ್ಟಂಗೆ ಪ್ರಸರಣಗೊಳ್ಳತಕ್ಕದ್ದು:

ಮತ್ತು ಪರಂತು, ಮೊದಲನೇ ಪರಂತುಕದ ಅಡಿಯಲ್ಲಿ ಕೋಷ್ಟಕ 6ಎನಲ್ಲಿ ಒದಗಿಸಿದ ಮಾಹಿತಿಯು, ಸದರಿ ತೆರಿಗೆ ಅವಧಿಗೆ **ನಮೂನೆ ಜಿಎಸ್‌ಟಿಆರ್–1** ರಲ್ಲಿ ಸ್ವಯಂ–ರಚಿತಗೊಳ್ಳತಕ್ಕದ್ದು.]

(3) ಉಪನಿಯಮ (1)ರಲ್ಲಿ ನಿರ್ದಿಷ್ಟಪಡಿಸಿದ ಸಮಯದ ಒಳಗಾಗಿ ಸರಕುಗಳು ರಫ್ತಾಗದಿದ್ದಲ್ಲಿ ಮತ್ತು ಸದರಿ ಉಪನಿಯಮದಲ್ಲಿ ನಮೂದಿಸಿದ ಮೊತ್ತವನ್ನು ನೋಂದಾಯಿತ ವ್ಯಕ್ತಿಯು ಸಂದಾಯ ಮಾಡಲು ವಿಫಲನಾದಲ್ಲಿ, ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ಅನುಮತಿಸಲಾದ ರಫ್ತನ್ನು ತತ್‌ಕ್ಷಣದಲ್ಲಿ ಹಿಂಪಡೆಯತಕ್ಕದ್ದು ಮತ್ತು ಸದರಿ ಮೊತ್ತವನ್ನು ನೋಂದಾಯಿತ ವ್ಯಕ್ತಿಯಿಂದ ಪ್ರಕರಣ 79ರ ಉಪಬಂಧಗಳಿಗೆ ಅನುಸಾರವಾಗಿ ವಸೂಲಾತಿ ಮಾಡತಕ್ಕದ್ದು.

---

**[6]01–07–2017ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಎ/2017) ದಿನಾಂಕ 05–07–2017ರ ಮೂಲಕ ಸೇರಿಸಲಾಗಿದೆ**

**[7]ಅಧಿಸೂಚನೆ ಸಂಖ್ಯೆ ಆಇ 47 ಸಿಎಸ್‌ಎಲ್ 2017 (4–ಹೆಚ್/2017) ದಿನಾಂಕ 09–11–2017ರ ಮೂಲಕ ಸೇರಿಸಲಾಗಿದೆ.**

**[8]ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಐ/2017) ದಿನಾಂಕ 13–12–2017ರ ಮೂಲಕ ಈ ಪರಂತುಕಗಳನ್ನುಸೇರಿಸಲಾಗಿದೆ.**

(4) ಬಾಂಡ್ ಅಥವಾ ವಾಗ್ದಾನ ಪತ್ರದ ಅಡಿಯಲ್ಲಿ ಅನುಮತಿಸಲಾದ, ಉಪನಿಯಮ (3) ನಿಬಂಧನೆಗಳಿಗೆ ಅನುಸಾರವಾಗಿ ಹಿಂಪಡೆಯಲಾದ ರಫ್ತನ್ನು, ನೋಂದಾಯಿತ ವ್ಯಕ್ತಿಯು ಬಾಕಿ ಮೊತ್ತವನ್ನು ಸಂದಾಯ ಮಾಡಿದಾಗ ಕೂಡಲೇ ಪೂರ್ವ ಸ್ಥಿತಿಗೆ ತರತಕ್ಕದ್ದು.

(5) ಮಂಡಳಿಯು, ಅಧಿಸೂಚನೆಯ ಮೂಲಕ, ಬಾಂಡ್‌ನ ಜಾಗದಲ್ಲಿ ಒಂದು ವಾಗ್ದಾನ ಪತ್ರವನ್ನು ಯಾವ ಷರತ್ತುಗಳು ಮತ್ತು ಸುರಕ್ಷತೆಗಳ ಅಡಿಯಲ್ಲಿ ಒದಗಿಸಬಹುದು ಎಂದು ನಿರ್ದಿಷ್ಟಪಡಿಸಬಹುದು.

(6) ಉಪನಿಯಮ (1)ರ ಉಪಬಂಧಗಳು ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರ ಅಥವಾ ವಿಶೇಷ ಆರ್ಥಿಕ ವಲಯ ಘಟಕಕ್ಕೆ ಏಕೀಕೃತ ತೆರಿಗೆಯನ್ನು ಸಂದಾಯ ಮಾಡದೆ, ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡರ ಶೂನ್ಯ-ದರದ ಪೂರೈಕೆಗೆ ಸಂಬಂಧಿಸಿದಂತೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.]

**97. ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿ.–** (1) ಎಲ್ಲಾ ಜಮೆಗಳನ್ನು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ನಿಯಮ 92ರ ಉಪನಿಯಮ (5)ರ ಅಡಿಯಲ್ಲಿ ಮಾಡತಕ್ಕದ್ದು.

(2) ನಿಧಿಗೆ ಜಮೆಗೊಳಿಸಲಾಗಿರುವ ಯಾವುದೇ ಮೊತ್ತವನ್ನು, ಯುಕ್ತ ಅಧಿಕಾರ, ಅಪೀಲು ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧಿಕರಣ ಅಥವಾ ನ್ಯಾಯಾಲಯದ ಆದೇಶದಿಂದ ಯಾವುದೇ ಕ್ಲೇಮುದಾರನಿಗೆ ಸಂದಾಯ ಮಾಡುವಂತೆ ಆದೇಶಿಸಿರುವುದನ್ನು ಅಥವಾ ನಿರ್ದೇಶಿಸಿರುವುದನ್ನು ನಿಧಿಯಿಂದ ಸಂದಾಯ ಮಾಡತಕ್ಕದ್ದು.

(3) ಪ್ರಕರಣ 58ರ ಉಪಪ್ರಕರಣ (1)ರ ಅಡಿಯಲ್ಲಿ ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಮೊತ್ತದ ಯಾವುದೇ ಬಳಕೆಯನ್ನು, ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಖರ್ಚು ಹಾಕುವುದರ ಮತ್ತು ಮೊತ್ತವು ಬಳಕೆಗಾಗಿ ವರ್ಗಾವಣೆಯಾಗಿರುವ ಖಾತೆಗೆ ಜಮೆಗೊಳಿಸುವುದರ ಮೂಲಕ ಮಾಡತಕ್ಕದ್ದು.

(4) ಸರ್ಕಾರವು, ಒಂದು ಆದೇಶದ ಮೂಲಕ, ಛೇರ್‌ಮನ್, ಉಪ-ಛೇರ್‌ಮನ್, ಒಬ್ಬ ಸದಸ್ಯ ಕಾರ್ಯದರ್ಶಿ ಮತ್ತು ಅದು ಸೂಕ್ತ ಎಂದು ಭಾವಿಸಬಹುದಾ ದ ಅಂಥ ಇತರ ಸದಸ್ಯರುಗಳನ್ನು ಒಳಗೊಂಡ ಒಂದು ಸ್ಥಾಯಿ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಸಮಿತಿಯು ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಗೆ ಜಮೆಗೊಳಿಸಲಾದ ಹಣವನ್ನು ಗ್ರಾಹಕ ಕ್ಷೇಮಾಭಿವೃದ್ಧಿಗಾಗಿ ಸಮರ್ಪಕವಾದ ಬಳಕೆಗಾಗಿ ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(5) ಸಮಿತಿಯು ಅವಶ್ಯಕತೆಯಿರುವಾಗ, ಮೂರು ತಿಂಗಳುಗಳಿಗೆ ಒಂದು ಬಾರಿ ಕಡಿಮೆಯಿಲ್ಲದಂತೆ ಸಭೆ ಸೇರತಕ್ಕದ್ದು.

(6) ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಉಪಬಂಧಗಳ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೇ ಕಾನೂನಿನ ಅಡಿಯಲ್ಲಿ, ನೋಂದಾಯಿತವಾದ, ಮೂರು ವರ್ಷಗಳ ಅವಧಿಗಾಗಿ ಗ್ರಾಹಕರ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿರುವ ಗ್ರಾಹಕರುಗಳ ವಿಶೇಷವಾಗಿ ಮಹಿಳೆ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ; ಗ್ರಾಮ ಅಥವಾ ಮಂಡಲ ಅಥವಾ ಸಮಿತಿ ಮಟ್ಟದ ಸಹಕಾರಿ ಸಂಘಗಳನ್ನು ಒಳಗೊಂಡಂತೆಯಾವುದೇ ಏಜನ್ಸಿ ಅಥವಾ ಸಂಘಟನೆ

ಅಥವಾ ಭಾರತೀಯ ಮಾನಕಗಳ ಬ್ಯೂರೋದಿಂದ, ಐದು ವರ್ಷಗಳ ಅವಧಿಗಾಗಿ, ಸಮೂಹ ಬಳಕೆಯ ಉತ್ಪನ್ನಗಳ ಮಾನಕ ಗುರುತಿನ ರೂಪಿಸುವಿಕೆಯಲ್ಲಿ ಮಹತ್ವದ ಕೊಡುಗೆಯನ್ನು ನೀಡುವ ಅಥವಾ ನೀಡಬಹುದಾಗಿರುವ ಕಾರ್ಯಸಾಧ್ಯವಾದ ಮತ್ತು ಉಪಯೋಗಕರವಾದ ಸಂಶೋಧನಾ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕಾಗಿ ಶಿಫಾರಸ್ಸುಗೊಂಡಿರುವ, ಕೈಗಾರಿಕಾ ವ್ಯಾಜ್ಯಗಳ ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 18) ಅಡಿಯಲ್ಲಿ ಪರಿಭಾಷಿಸಲಾದ ಯಾವುದೇ ಕೈಗಾರಿಕೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಅನುದಾನಕ್ಕಾಗಿ ಅರ್ಜಿಯನ್ನು ಹಾಕಬಹುದು.

ಪರಂತು, ಒಬ್ಬ ಗ್ರಾಹಕನು, ಗ್ರಾಹಕರ ವ್ಯಾಜ್ಯದಲ್ಲಿನ ದೂರುದಾರನಾಗಿ ಆತನಿಂದ ಭರಿಸಿದ ಕಾನೂನು ವೆಚ್ಚಗಳ ಮರುಭರಿಸುವಿಕೆಗಾಗಿ ಅದರ ಅಂತಿಮ ನ್ಯಾಯನಿರ್ಣಯದ ನಂತರ ಅರ್ಜಿಯನ್ನು ಸಲ್ಲಿಸಬಹುದು.

(7) ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ಅನುದಾನದ ಎಲ್ಲಾ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿ ಅರ್ಜಿದಾರನಿಂದ ಸಲ್ಲಿಸತಕ್ಕದ್ದು ಆದರೆ ಸಮಿತಿಯು ಮುಖ್ಯ ವಿಷಯಗಳ ವಿವರಗಳನ್ನು ಪರಿಶೀಲಿಸಲಾಗಿರುವ ಮತ್ತು ಅದಕ್ಕನುಗುಣವಾಗಿ ಸದಸ್ಯ ಕಾರ್ಯದರ್ಶಿಯಿಂದ ಪರಿಗಣನೆಗೆ ಶಿಫಾರಸ್ಸಾಗಿರುವ ಹೊರತು ಒಂದು ಅರ್ಜಿಯನ್ನು ಪರಿಗಣಿಸತಕ್ಕದ್ದಲ್ಲ.

(8) ಸಮಿತಿಯು ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು–

(ಎ) ಅರ್ಜಿದಾರನ ಅಭಿರಕ್ಷೆ ಮತ್ತು ನಿಯಂತ್ರಣದಲ್ಲಿರುವ ಅಂಥ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಪರಿಕರಗಳು ಅಥವಾ ವಸ್ತುಗಳನ್ನು, ಅರ್ಜಿಯ ಸಮರ್ಪಕವಾದ ಮೌಲ್ಯಮಾಪನಕ್ಕಾಗಿ ಅದರ ಮುಂದೆ ಅಥವಾ ಸರ್ಕಾರದ ಯುಕ್ತ ಪ್ರಾಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸುವಂತೆ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಬಿ) ಗ್ರಾಹಕರ ಕ್ಷೇಮಾಭಿವೃದ್ಧಿಗಾಗಿ ಎಂದು ಕ್ಲೇಮು ಮಾಡಲಾದ ಚಟುವಟಿಕೆಗಳು ನಡೆಯುತ್ತಿವೆ ಎಂದು ನಿರೂಪಿಸಬಹುದಾದ ಯಾವುದೇ ಸ್ಥಳಗಳ ಪ್ರವೇಶ ಮತ್ತು ತಪಾಸಣೆಗೆ, ಕೇಂದ್ರ ಸರ್ಕಾರ ಅಥವಾ, ಸಂದರ್ಭಾನುಸಾರವಾಗಿ ರಾಜ್ಯ ಸರ್ಕಾರದ ಯುಕ್ತ ಪ್ರಾಧಿಕೃತ ಅಧಿಕಾರಿಯನ್ನು ಅನುಮತಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಸಿ) ಅನುದಾನದ ಸಮರ್ಪಕವಾದ ಬಳಕೆಯನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ, ಅರ್ಜಿದಾರನ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸುವುದು;

(ಡಿ) ಆತನ ಕಡೆಯಿಂದ ಮುಖ್ಯ ವಿಷಯಗಳ ಮಾಹಿತಿ ನೀಡುವಿಕೆಯಲ್ಲಿ ತಪ್ಪಿದ್ದಲ್ಲಿ ಅಥವಾ ಬಚ್ಚಿಟ್ಟಿರುವ ಸಂದರ್ಭದಲ್ಲಿ ಮಂಜೂರು ಮಾಡಿರುವ ಅನುದಾನವನ್ನು, ಒಂದೇ ಮೊತ್ತದಲ್ಲಿ ಸಮಿತಿಗೆ ಮರುಪಾವತಿ ಮಾಡಲು ಮತ್ತು ಅಧಿನಿಯಮದ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು ಅಗತ್ಯಪಡಿಸುವುದು;

(ಇ) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಯಾವೊಬ್ಬ ಅರ್ಜಿದಾರನಿಂದ ಬಾಕಿಯಿರುವ ಯಾವುದೇ ಮೊತ್ತವನ್ನು ವಸೂಲಿ ಮಾಡುವುದು;

(ಎಫ್) ಅನುದಾನದ ಸಮರ್ಪಕ ಬಳಕೆಯನ್ನು ಸೂಚಿಸುವ ಒಂದು ನಿಯತಕಾಲಿಕ ವರದಿಯನ್ನು ಸಲ್ಲಿಸುವುದಕ್ಕಾಗಿ ಯಾವುದೇ ಅರ್ಜಿದಾರನನ್ನು, ಅಥವಾ ಅರ್ಜಿದಾರನ ವರ್ಗವನ್ನು ಅಗತ್ಯಪಡಿಸುವುದು;
(ಜಿ) ಅದರ ಮುಂದೆ ಇಡಲಾದ ಒಂದು ಅರ್ಜಿಯನ್ನು, ಸಂಗತಿಗಳ ಅಸಂಗತತೆ, ಅಥವಾ ಮುಖ್ಯ ವಿಷಯಗಳ ವಿವರಗಳಲ್ಲಿ ನಿಖರತೆಯಿಲ್ಲದಿರುವ ಕಾರಣದಿಂದಾಗಿ ತಿರಸ್ಕರಿಸುವುದು;
(ಹೆಚ್) ಅರ್ಜಿದಾರನಿಗೆ, ಆತನ ಹಣಕಾಸಿನ ಸ್ಥಿತಿಗತಿಯನ್ನು ಮತ್ತು ವೃತ್ತಿಯ ಅಡಿಯಲ್ಲಿನ ಚಟುವಟಿಕೆಯ ಸ್ವರೂಪದ ಮಹತ್ವ ಮತ್ತು ಉಪಯುಕ್ತತೆಯನ್ನು ಗಮನದಲ್ಲಿಟ್ಟುಕೊಂಡು, ಒದಗಿಸಲಾದ ಹಣಕಾಸಿನ ನೆರವು

ದುರುಪಯೋಗವಾಗತಕ್ಕದ್ದಲ್ಲ ಎನ್ನುವುದನ್ನು ಖಾತರಿಪಡಿಸಿಕೊಂಡ ನಂತರ ಅನುದಾನದ ರೂಪದಲ್ಲಿ, ಕನಿಷ್ಟ ಹಣಕಾಸಿನ ನೆರವನ್ನು ಶಿಫಾರಸ್ಸು ಮಾಡುವುದು;

(ಐ) ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಲ್ಲಿ ಹೂಡಿಕೆಗಳನ್ನು ಮಾಡಬಹುದಾಗಿದ್ದಲ್ಲಿ, ಪ್ರಯೋಜನಕರ ಮತ್ತು ಸುರಕ್ಷಿತ ಕ್ಷೇತ್ರಗಳನ್ನು ಗುರುತಿಸುವುದು ಮತ್ತು ಅದರ ಪ್ರಕಾರವಾಗಿ ಶಿಫಾರಸ್ಸುಗಳನ್ನು ಮಾಡುವುದು;

(ಜೆ) ಒಬ್ಬ ಅರ್ಜಿದಾರನು ಗ್ರಾಹಕ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆಯ ಅವಧಿಗಾಗಿ ಅಗತ್ಯಪಡಿಸಿದ ಷರತ್ತುಗಳನ್ನು ಸಡಿಲಗೊಳಿಸುವುದು;

(ಕೆ) ಗ್ರಾಹಕ ಕ್ಷೇಮಾಭಿವೃದ್ಧಿ ನಿದಿಯ ನಿರ್ವಹಣೆ, ಆಡಳಿತ ಮತ್ತು ಲೆಕ್ಕಪರಿಶೋಧನೆಗಾಗಿ ಮಾರ್ಗದರ್ಶಿಗಳನ್ನು ರೂಪಿಸುವುದು.

(9) ಕೇಂದ್ರ ಗ್ರಾಹಕ ಸಂರಕ್ಷಣಾ ಪರಿಷತ್ ಮತ್ತು ಭಾರತೀಯ ಮಾನಕಗಳ ಬ್ಯೂರೋ, ಗ್ರಾಹಕ ಕ್ಷೇಮಾಭಿವೃದ್ಧಿ ನಿಧಿಯಿಂದ ವೆಚ್ಚಗಳನ್ನು ಭರಿಸುವ ಉದ್ದೇಶಕ್ಕಾಗಿ ಯೋಜನೆಗಳು ಅಥವಾ ಪ್ರಸ್ತಾವನೆಗಳನ್ನು ಪರಿಗಣಿಸುವುದಕ್ಕಾಗಿ ವಿಶಾಲ ಮಾರ್ಗದರ್ಶಿಗಳನ್ನು, ಸರಕು ಮತ್ತು ಸೇವೆಗಳ ತೆರಿಗೆ ಪರಿಷತ್‌ಗೆ ಶಿಫಾರಸ್ಸು ಮಾಡತಕ್ಕದ್ದು.

[9][**97ಎ. ಖುದ್ದು ಸಲ್ಲಿಕೆ ಮತ್ತು ಸಂಸ್ಕರಣೆ,–** ಇದರಲ್ಲಿ ನಿಯಮಿಸಲಾದ ಯಾವುದೇ ಪ್ರಕ್ರಿಯೆ ಅಥವಾ ಕಾರ್ಯವಿಧಾನಕ್ಕೆ, ಒಂದು ಅರ್ಜಿಯ, ತಿಳಿವಳಿಕೆ ಪತ್ರದ, ಉತ್ತರದ, ಘೋಷಣೆಯ, ವಿವರ ಪತ್ರದ ವಿದ್ಯುನ್ಮಾನ ರೀತಿಯಲ್ಲಿನ ಸಲ್ಲಿಕೆಯ ಯಾವುದೇ ಉಲ್ಲೇಖಕ್ಕೆ ಅಥವಾ ಸಾಮಾನ್ಯ ಪೋರ್ಟಲ್‌ನಲ್ಲಿ ಒಂದು ಸೂಚನಾ ಪತ್ರ, ಆದೇಶ ಅಥವಾ ಪ್ರಮಾಣ ಪತ್ರ ನೀಡಿಕೆಗೆ ಸಂಬಂಧಿಸಿದಂತೆ ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಆ ಪ್ರಕ್ರಿಯೆ ಅಥವಾ ಕಾರ್ಯ ವಿಧಾನವು, ಸದರಿ ಅರ್ಜಿಯ, ತಿಳಿವಳಿಕೆ ಪತ್ರದ, ಘೋಷಣೆಯ, ವಿವರ ಪತ್ರದ ಖುದ್ದು ಸಲ್ಲಿಕೆ ಅಥವಾ ಸದರಿ ಸೂಚನಾ ಪತ್ರ, ಆದೇಶ ಅಥವಾ ಪ್ರಮಾಣ ಪತ್ರದ ಖುದ್ದು ನೀಡಿಕೆಯನ್ನು ಒಳಗೊಳ್ಳತಕ್ಕದ್ದು.]

---

[9]**ಅಧಿಸೂಚನೆ ಸಂ. ಆಇ 47 ಸಿಎಸ್‌ಎಲ್ 2017 (4–ಜೆ/2017) ದಿನಾಂಕ 03–01–2018ರ ಮೂಲಕ ಸೇರಿಸಲಾಗಿದೆ.**